# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಭಾನುವಾರ, ಜುಲೈ 24, 2022

ಸಂಪುಟ : 49 ಸಂಚಿಕೆ : 71 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಚಳವಳಿಗಳಿಗೆ ಮನೋಭೂಮಿಕೆ ಸಿದ್ಧ ಮಾಡುವುದು ಬಂಡಾಯ ಸಾಹಿತ್ಯ



ದಾವಣಗೆರೆ, ಜು. 23- ಜಾತಿ, ಲಿಂಗ, ವರ್ಗ, ಧರ್ಮ ತಾರತಮ್ಯತೆ, ಅಸಮಾನತೆ, ಅಸಹಿಷ್ಣುತೆ ಸಮಾಜವನ್ನು ಬದಲಾಯಿಸಿ, ಸಮಾನತೆ ಮತ್ತು ಸಹಿಷ್ಣುತೆ ಸಮಾಜವನ್ನಾಗಿ ರೂಪಾಂತರಿ ಸುವ ವ್ಯವಸ್ಥೆಯೇ ಬಂಡಾಯ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಬಂಡಾಯ ಸಾಹಿತ್ಯ ಸಂಘಟನೆ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬಂಡಾಯವೆಂದರೆ ಹೊಡಿ, ಬಡಿ, ಕಡಿ ಅಲ್ಲ. ಸಮಾಜ ಬದಲಾವಣೆಯ ಆಶಯ. ಅಂತಹ ಆಶಯಕ್ಕೆ ಬದ್ಧರಾಗಿರು ವವರೇ ನಿಜವಾದ ಬಂಡಾಯಗಾರರು, ಬಂಡಾಯ ಸಾಹಿತಿಗಳು ಎಂದು ನುಡಿದರು.

ಈ ಹಿಂದೆ ಬರೀ ಸಮಾನತೆ ಬಗ್ಗೆ ಮಾತ ನಾಡುತ್ತಿದ್ದ ನಾವು, ಈಗ ಸಹಿಷ್ಣುತೆ ಯನ್ನೂ ಸೇರಿಸಿ ಕೊಂಡಿದ್ದೇವೆ. ದೇಶ ಸಹಿಷ್ಣುತೆಯ ದೇಶ ಎಂದುಕೊಂಡಿ ದ್ದೆವು. ಆದರೆ ಸಹಿಷ್ಣುತೆಯೂ ಇಲ್ಲವಾಗಿದೆ. ದ್ವೇಷ ಭಾಷಣದ ಮೂಲಕ ಮನುಷ್ಯ-ಮನುಷ್ಯರ ನಡುವೆ ಒಡಕು ಉಂಟು ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು? ಎಂಬ ಚಿಂತನೆ ಅಗತ್ಯ ಎಂದರು.

ಎಲ್ಲಾ ರೀತಿಯ ಪ್ರಗತಿಪರ ವಿಚಾರ ಧಾರೆ ಯವನ್ನೂ ಒಗ್ಗೂಡಿಸಿಕೊಂಡಿರುವ ಈ ನಾಡನ ಏಕೈಕ ಸಂಘಟನೆ ಬಂಡಾಯ ಸಾಹಿತ್ಯ ಸಂಘಟನೆ. ಇಲ್ಲಿ ಮಾರ್ಕ್ಸ್, ಅಂಬೇಡ್ಕರ್, ಗಾಂಧಿ, ಲೋಹಿಯಾ ವಾದಿಗಳಿದ್ದಾರೆ. ಎಲ್ಲಾ ವಾದಕ್ಕೂ ಬದ್ಧ ರಾಗಿರುವವರಿದ್ದಾರೆ. ಆದರೆ ಯಾವುದೇ ವಾದಕ್ಕೂ ಸಂಬಂಧ ಪಡದೆ ಒಟ್ಟಾರೆ ಸಮಾಜ ಬದಲಾವಣೆ ಬೇಕು ಎನ್ನುವ ವಿಶಾಲ ವ್ಯಾಪ್ತಿಯ ಪ್ರಗತಿಪರರೂ ಇದ್ದಾರೆ. ಇಂತಹ ವಿಶಾಲ ವ್ಯಾಪ್ತಿಯ ಸಾಂಸ್ಕೃತಿಕವಾದ ಸಂಘಟನೆ ಇದಾಗಿದೆ ಎಂದರು.

**ನಗರದಲ್ಲಿ 2 ದಿನಗಳ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನ ಆರಂಭ**

ಬಂಡಾಯ ಸಾಹಿತ್ಯ (4ನೇ ಪುಟಕ್ಕೆ)

## ಸೆಪ್ಟೆಂಬರ್ 1 ರಿಂದ ನೀಟ್ ಪಿಜಿ ಕೌನ್ಸೆಲಿಂಗ್

ನವದೆಹಲಿ, ಜು. 23 – ನೀಟ್ - ಪಿಜಿ ಕೌನ್ಸೆ ಲಿಂಗ್ ಬರುವ ಸೆಪ್ಟೆಂಬರ್ 1ರಿಂದ ಆರಂಭವಾ ಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನೀಟ್ - ಪಿಜಿ 2022ರಲ್ಲಿ ಅರ್ಹತೆ ಪಡೆದವರಿಗೆ ಕಾಲೇಜುಗಳಲ್ಲಿ ಪ್ರವೇಶ ನೀಡಲು ಕೌನ್ಸೆಲಿಂಗ್ ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2021ರಲ್ಲಿ 748 ಸೂಪರ್ ಸ್ಪೆಷಾಲಿಟಿ ಸೀಟುಗಳು ಖಾಲಿ ಉಳಿದಿದ್ದವು. ಈ ಹಿನ್ನೆಲೆಯಲ್ಲಿ ಅರ್ಹತಾ ಮಾನದಂಡವನ್ನು ಪರಿಗಣಿಸದೇ ಎಲ್ಲಾ ಸೀಟುಗಳಿಗೆ ಕೌನ್ಸೆಲಿಂಗ್ ನಡೆಸಲು ನಿರ್ಧರಿಸಲಾಗಿದೆ.

## ಕೊಕ್ಕನೂರು ಗ್ರಾಮದ ಜಿ.ದ್ಯಾಮಪ್ಪ ನಿಧನ



ಹರಿಹರ ತಾಲ್ಲೂಕು ಕೊಕ್ಕನೂರು ಗ್ರಾಮದ ಹಿರಿಯರೂ, ಶ್ರೀ ಬೀರಲಿಂಗೇಶ್ವರ ವಿದ್ಯಾಸಂಸ್ಥೆಯ ಗೌರವಾಧ್ಯಕ್ಷರೂ, ಮಲೇಬೆನ್ನೂರಿನ ಶಿವ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರೂ, ಹರಿಹರ ತಾಲ್ಲೂಕು ಶ್ರೀ ಕಾಳಿದಾಸ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್‌ನ ಕಾರ್ಯಾಧ್ಯಕ್ಷರಾದ ಮತ್ತು ದಾವಣಗೆರೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರೂ, ಜಿಲ್ಲಾ ಕುರುಬ ಸಮಾಜದ ಹಾಲಿ ಅಧ್ಯಕ್ಷರೂ ಆದ

**ಶ್ರೀ ಜಿ ದ್ಯಾಮಪ್ಪ**

ಇವರು ದಿನಾಂಕ 23.7.2022 ರ ಶನಿವಾರ ರಾತ್ರಿ 11 ಗಂಟೆಗೆ ದೈವಾಧೀನರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 85 ವರ್ಷ ವಯಸ್ಸಾಗಿತ್ತು.
ಮೃತರು ಐವರು ಪುತ್ರರು, ಐವರು ಪುತ್ರಿಯರು, ಸಹೋದರರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.07.2022ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಕೊಕ್ಕನೂರಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು
ಗಿಡ್ಡಕ್ಕರ ವಂಶಸ್ಥರು ಹಾಗೂ ಗ್ರಾಮಸ್ಥರು, ಕೊಕ್ಕನೂರು ಮತ್ತು ಬಂಧು -ಮಿತ್ರರು

## ಪಿಎಸ್ಐ ನೇಮಕಾತಿ ಹಗರಣ ಕೇಂದ್ರ ಸಂಸ್ಥೆಗಳಿಂದ ತನಿಖೆ

**ಚುನಾವಣೆ ಸಂದರ್ಭದಲ್ಲಿ ಕಠಿಣ ನಿರ್ಧಾರಕ್ಕೆ ಮುಂದಾದ ಸರ್ಕಾರ**

ಬೆಂಗಳೂರು, ಜು.23 - ಪಿಎಸ್ಐ ನೇಮಕಾತಿ ಸೇರಿದಂತೆ, ಇತ್ತೀಚಿನ ವರ್ಷಗಳಲ್ಲಿ ಸರ್ಕಾರಿ ನೇಮಕಾತಿಗಳಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಕೇಂದ್ರ ತನಿಖಾ ತಂಡಗಳಿಂದ ತನಿಖೆ ನಡೆಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬಿಜೆಪಿ ವರಿಷ್ಠರು ಕೇಂದ್ರ ಗೃಹ ಇಲಾಖೆಯ ಸೂಚನೆ ಮೇರೆಗೆ ಈ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ಪತ್ರ ಬರೆಯಲಿದೆ.

ನೇಮಕಾತಿ ಹಗರಣದಲ್ಲಿ ಕೋಟ್ಯಾಂತರ ರೂ. ಅವ್ಯವಹಾರ ಮತ್ತು ವಹಿವಾಟು ನಡೆದಿರುವುದರಿಂದ ಈ ಬಗ್ಗೆ ಇ.ಡಿ. ಮತ್ತು ಸಿ.ಬಿ.ಐ.ನಿಂದ ತನಿಖೆ ನಡೆಸಲು ಸಿದ್ಧತೆ ನಡೆದಿದೆ. ಅಕ್ರಮ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರದಲ್ಲಿ ಕೆಲವು ರಾಜಕೀಯ (2ನೇ ಪುಟಕ್ಕೆ)

|| ಶ್ರೀ ಸಂಗಮೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ




ದಾವಣಗೆರೆ ಜಿಲ್ಲೆ, ಹರಿಹರ ನಗರದ ಹಳ್ಳದಕೇರಿ ವಾಸಿ
ಶ್ರೀಮತಿ ಶಾಂತಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.
ದಿ.: 16.07.22ನೇ ಶನಿವಾರ ಬೆಳಿಗ್ಗೆ : 5.30 ಗಂಟೆಗೆ ನನ್ನ ಪೂಜ್ಯ ಪತಿಯವರಾದ
**ಶ್ರೀ ಗೌಡ್ರ ಮಲ್ಲೇಶಪ್ಪನವರು**
ಮಾಜಿ ಅಧ್ಯಕ್ಷರು, ತುಂಗಭದ್ರ ಕ್ರೆಡಿಟ್ ಕೋ-ಆ. ಸೊಸೈಟಿ ಲಿ., ಮಾಲೀಕರು, ಜಿ.ಎಂ. ಆಟೋಮೊಬೈಲ್ಸ್, ಹರಿಹರ.
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿ.: 24.07.22ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಹರಿಹರ ನಗರದ ಶಿವಮೊಗ್ಗ ರಸ್ತೆ, ಹಳ್ಳದಕೇರಿಯಲ್ಲಿರುವ ಸಂಗಮೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶಾಂತಮ್ಮ ಮತ್ತು ಚಿ. ಸಿದ್ದೇಶ್
ಶ್ರೀಮತಿ ಗಾಯತ್ರ, ಶ್ರೀ ಪ್ರವೀಣ, ಹರಿಹರ. ಶ್ರೀಮತಿ ಲಕ್ಷ್ಮಿಶ್ರೀ ಕಲ್ಲೇಶ್, ಬಸವಾಪಟ್ಟಣ
ಮೃತರ ಸಹೋದರರು, ಸಹೋದರಿಯರು, ಗೌಡ್ರ ವಂಶಸ್ಥರು ಹಾಗೂ ಸಕಲ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



ಶ್ರಾವಣ ಸಂಭ್ರಮ–2022
"ಇಂದಿನಿಂದ ಡಬಲ್ ಡಿಸ್ಕೌಂಟ್ ಸಂಭ್ರಮ ಪ್ರಾರಂಭ"
ಎಲ್ಲವೂ ಹೊಸತು..
ಶ್ರಾವಣದ ಹಬ್ಬಗಳಿಗಾಗಿಯೇ ಬಂದಿರುವ
ನಯನ ಮನೋಹರ ಲಕ್ಷಾಂತರ ಸೀರೆಗಳು,
ಸಿಲ್ಕ್ ಮತ್ತು ಹ್ಯಾಂಡ್‌ಲೂಮ್ ಸೀರೆಗಳು,
ವಿಶೇಷವಾಗಿ ಪ್ರಖ್ಯಾತ ಕಂಪನಿಗಳ ಹೊಚ್ಚ ಹೊಸ ಸೀರೆಗಳು,
ಲೇಡೀಸ್ ರೆಡಿಮೇಡ್ ಡ್ರೆಸ್ & ಡ್ರೆಸ್ ಮೆಟೀರಿಯಲ್ಸ್,
ಜೊತೆಗೆ ಎಲ್ಲಾ ಮಕ್ಕಳ ರೆಡಿಮೇಡ್ ಬಟ್ಟೆಗಳು,
ಪುರುಷರ ಎಲ್ಲಾ ಬಟ್ಟೆಗಳು, ರೆಡಿಮೇಡ್ ಮತ್ತು
ಪ್ರಖ್ಯಾತ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳು.
ರಿಯಾಯಿತಿ ಮತ್ತು ವಿಶೇಷ ರಿಯಾಯಿತಿ
"ದಿನಾಂಕ: 24-07-2022ನೇ ಭಾನುವಾರದಿಂದ ಪ್ರಾರಂಭ"
ವರ್ಷದಲ್ಲಿ ಕೇವಲ ಒಮ್ಮೆ ಮಾತ್ರ ಈ ಡಬಲ್ ಡಿಸ್ಕೌಂಟ್ ದಾವಣಗೆರೆಯ ನಮ್ಮ ಎಲ್ಲಾ ಅಂಗಡಿಯಲ್ಲಿ...!
ಬನ್ನಿ... ನೋಡಿ ಆನಂದಿಸಿ... ನಂತರ ಖರೀದಿಸಿ...
ಬಿ.ಎಸ್.ಚನ್ನಬಸಪ್ಪ & ಸನ್ಸ್ ®
ದಾವಣಗೆರೆ.





# ಯಡಿಯೂರಪ್ಪ ಸಕ್ರಿಯ ರಾಜಕಾರಣದಿಂದ ನಿವೃತ್ತಿ ಬೇಡ

ಬೆಂಗಳೂರು, ಜು. 23 - ಸಕ್ರಿಯ ರಾಜಕಾರಣದಿಂದ ನಿವೃತ್ತಿ ಬೇಡ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.



ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವುದಾಗಿ ಯಡಿಯೂರಪ್ಪ ನಿನ್ನೆ ಘೋಷಣೆ ಮಾಡಿದ ಬೆನ್ನಲ್ಲೆ ಮುಖ್ಯಮಂತ್ರಿಯವರು ಇಂದು ಕಾವೇರಿ ನಿವಾಸಕ್ಕೆ ತೆರಳಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಈ ಮನವಿ ಮಾಡಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆ ನಿಮ್ಮ ನಾಯಕತ್ವದಲ್ಲೇ ನಡೆಯಬೇಕು. ನಿಮ್ಮ ಮಾರ್ಗದರ್ಶನದಲ್ಲಿ ಚುನಾವಣೆ ನಡೆದು, ಪಕ್ಷವನ್ನು ಅಧಿಕಾರಕ್ಕೆ ತರೋಣ ಎಂದವರು ಹೇಳಿದ್ದಾರೆ.

ಆದರೆ, ನಿನ್ನೆ ಏಕಾಏಕಿ ದಿಢೀರನೆ ತೆಗೆದುಕೊಂಡಿರುವ ನಿರ್ಧಾರ ನಮ್ಮೆಲ್ಲರನ್ನು ದಿಗ್ಭ್ರಮೆಗೊಳಿಸಿದೆ. ನೀವು ರಾಜಕೀಯದಲ್ಲಿ ಸಕ್ರಿಯವಾಗಿದ್ದು, ನಮ್ಮಂತಹವರನ್ನು ಮತ್ತು ಕಾರ್ಯಕರ್ತರನ್ನು ಪ್ರೋತ್ಸಾಹಿಸಬೇಕು. ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಹಿಡಿಯಲು ನಿಮ್ಮ ಸಹಕಾರ ಅತ್ಯವಶ್ಯ ಎಂದಿದ್ದಾರೆ.

ಪಕ್ಷ ಯಾವುದೇ ತೀರ್ಮಾನಗಳನ್ನು ಕೈಗೊಂಡಿಲ್ಲ. ಇದರ ನಡುವೆ ನೀವು ಇಂತಹ ಹೇಳಿಕೆ ನೀಡಿರುವುದು ನಮಗೆ ಸರಿ ಬರುತ್ತಿಲ್ಲ. ನೀವು ಸಕ್ರಿಯ ರಾಜಕಾರಣದಲ್ಲಿದ್ದು, ಪಕ್ಷವನ್ನು ಮುನ್ನಡೆಸಬೇಕೆಂದು ಕೋರಿದ್ದಾರೆ.

## ಬಿ.ಎಸ್.ಯಡಿಯೂರಪ್ಪ ಇನ್ನೊಂದು ಬಾರಿ ಸ್ಪರ್ಧಿಸಬೇಕು

ಹೊನ್ನಾಳಿ,ಜು.23- ಹಿರಿಯ ಧುರೀಣ ಬಿ.ಎಸ್. ಯಡಿಯೂರಪ್ಪ ಅವರು ಶಿಕಾರಿಪುರದಿಂದ ಇನ್ನೊಂದು ಬಾರಿ ಸ್ಪರ್ಧಿಸಬೇಕೆಂಬುದು ಎಲ್ಲರ ಅಪೇಕ್ಷೆಯಾಗಿದೆ ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಆಶಯ ವ್ಯಕ್ತಪಡಿಸಿದರು.

ಇಲ್ಲಿನ ಹಿರೇಕಲ್ಮಠ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪನವರು ರಾಜ್ಯ ಪ್ರವಾಸ ಮಾಡುತ್ತೇನೆ, ಬಿಜೆಪಿ ಅಧಿಕಾರಕ್ಕೆ ತರುತ್ತೇನೆಂದು ಹೇಳಿದ್ದು, ಅವರು ಜಾತ್ಯತೀತ ವ್ಯಕ್ತಿ, ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕೆಂದು ಸಂಕಲ್ಪ ಮಾಡಿದ್ದಾರೆ. ಜನರು ಮತ್ತೆ ಬಿಜೆಪಿಗೆ ಆಶೀರ್ವಾದ ಮಾಡುತ್ತಾರೆ. 2023 ಕ್ಕೆ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಯಡಿಯೂರಪ್ಪನವರಿಗೆ ವಯಸ್ಸಾಗಿರಬಹುದು, ಆದರೆ ಅವರ ಮನಸ್ಸಿಗೆ ಅಲ್ಲ ಎಂದ ರೇಣುಕಾಚಾರ್ಯ, ವಿಜಯೇಂದ್ರ ಅವರ ಸ್ಪರ್ಧೆ ಬಗ್ಗೆ ನಾನು ಏನೂ ಮಾತನಾಡುವುದಿಲ್ಲ. ಅವರು ಎಲ್ಲಿ ಸ್ಪರ್ಧೆ ಮಾಡಬೇಕೆಂಬುದನ್ನು ವರಿಷ್ಠರು ತೀರ್ಮಾನ ಮಾಡುತ್ತಾರೆ ಎಂದರು.

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರ ಬೀದಿ ಜಗಳ ಜಗಜ್ಜಾಹೀರಾಗಿದೆ, ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾವಿ ಹೊಲಿಸುವ ಕೆಲಸವನ್ನು ಅವರು ಮಾಡುತ್ತಿದ್ದಾರೆ, ಯಾವುದೇ ಕಾರಣಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ ಎಂದರು.



ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅಪರೂಪಕ್ಕೆ ಒಂದೊಂದು ಬಾರಿ ಸತ್ಯವನ್ನು ಹೇಳುತ್ತಾರೆ, ಭ್ರಷ್ಟಾಚಾರಕ್ಕೆ ಮತ್ತೊಂದು ಹೆಸರು ಕಾಂಗ್ರೆಸ್, ಇಡಿ ವಿಚಾರಣೆಗೆ ಕರೆದರೆ ಅದನ್ನು ವಿರೋಧಿಸುತ್ತಾರೆಂದರೆ ಇವರಿಗೆ ಏನು ಹೇಳಬೇಕು. ಕಾನೂನಿಗೆ ಎಲ್ಲರೂ ತಲೆ ಬಾಗಲೇಬೇಕು. ಅದನ್ನು ವಿರೋಧಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಕೆಲ ಪುಡಿ ರೌಡಿಗಳು ಯುವ ಕಾಂಗ್ರೆಸ್ ಸೇರಿಕೊಂಡು ಗುಜರಿ ಕಾರು ಸುಟ್ಟಿದ್ದಾರೆ, ಕಾಂಗ್ರೆಸ್ಸನ್ನು ಈಗಾಗಲೇ ಜನರು ಗುಜರಿಗೆ ಹಾಕಿದ್ದಾರೆ, ರಾಜ್ಯದಲ್ಲೂ ಕೂಡ ಜನರು ಕಾಂಗ್ರೆಸ್ಸನ್ನು ಗುಜರಿಗೆ ಹಾಕುತ್ತಾರೆ ಎಂದರು.

**ಕಣ್ಣೀರಿಟ್ಟ ರೇಣುಕಾಚಾರ್ಯ :** ಯಡಿಯೂರಪ್ಪ ಅವರು ಹೊನ್ನಾಳಿಯಲ್ಲಿರುವ ರೇಣುಕಾಚಾರ್ಯ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ಆಗ ಅವರನ್ನು ಕಂಡು ರೇಣುಕಾಚಾರ್ಯ ಕಣ್ಣೀರು ಹಾಕಿದ ಪ್ರಸಂಗ ನಡೆಯಿತು. ಅಷ್ಟೇ ಅಲ್ಲದೇ ಮಾಧ್ಯಮದವರು ಯಡಿಯೂರಪ್ಪನವರ ಬಗ್ಗೆ ಕೇಳಿದ ಪ್ರಶ್ನೆಗೆ ಗದ್ಗದಿತರಾಗಿ ಉತ್ತರಿಸಿದರು.

# ಪಿಎಸ್ಐ ಹಗರಣ ಕೇಂದ್ರ ಸಂಸ್ಥೆಗಳಿಂದ ತನಿಖೆ

(1ನೇ ಪುಟದಿಂದ) ಪಕ್ಷಗಳ ಮುಖಂಡರು ಶಾಮೀಲಾಗಿದ್ದಾರೆ. ಅವರನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವುದೇ ಈ ತನಿಖೆಯ ಉದ್ದೇಶ ಎನ್ನಲಾಗಿದೆ.

ರಾಜ್ಯ ವಿಧಾನಸಭಾ ಚುನಾವಣಾ ಸಮೀಪದಲ್ಲಿ ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಳ್ಳುತ್ತಿರುವ ಬಿಜೆಪಿ ವರಿಷ್ಠರು ಅದರಲ್ಲಿ ಪಕ್ಷಕ್ಕೆ ಕಂಟಕವಾಗಿರುವವರನ್ನು ಸಿಲುಕಿಸಲು ಮುಂದಾಗಿದೆ.

ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ನಡೆದಿರುವ ಬಹುತೇಕ ನೇಮಕಾತಿಗಳಲ್ಲಿ ಅಕ್ರಮ ಮತ್ತು ದೊಡ್ಡ ಪ್ರಮಾಣದ ಹಣಕಾಸು ವರ್ಗಾವಣೆಯಾಗಿದೆ.

ಲೋಕಸೇವಾ ಆಯೋಗದ ನೇಮಕಾತಿಯಲ್ಲೂ ಆರೋಪಗಳು ಕೇಳಿ ಬಂದಿದ್ದವು. ಇದಲ್ಲದೆ ವಿವಿಧ ಇಲಾಖೆಗಳಲ್ಲಿ ನೇಮಕಾತಿ ಮಾಡುವ ಸಂದರ್ಭದಲ್ಲೂ ದೊಡ್ಡ ಪ್ರಮಾಣದಲ್ಲಿ ಅಕ್ರಮವಾಗಿದೆ.

ಈ ಹಿಂದೆ ಪಿಎಸ್ಐ ನೇಮಕಾತಿಯಲ್ಲೂ ಅಕ್ರಮಗಳು ನಡೆದಿವೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ತನಿಖೆಗೆ ಮುಂದಾಗಿದೆ. ಈ ಅಕ್ರಮಗಳಿಂದ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಕಳಂಕ ಎದುರಾಗಿದ್ದು, ಅದನ್ನು ನಿವಾರಿಸುವ ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ, ಮುಂದೆ ಇಂತಹ ಘಟನಾವಳಿಗಳು ಮರುಕಳಿಸದಂತೆ ನೋಡಿಕೊಳ್ಳಲು ವರಿಷ್ಠರು ಈ ನಿರ್ಣಯ ಕೈಗೊಂಡಿದ್ದಾರೆ. ವರಿಷ್ಠರ ನಿರ್ಣಯದಂತೆ ಮುಖ್ಯಮಂತ್ರಿಯವರು ಇತ್ತೀಚಿನ ನೇಮಕಾತಿಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಕೇಂದ್ರ ಗೃಹ ಹಾಗೂ ಹಣಕಾಸು ಇಲಾಖೆಯನ್ನು ಕೋರಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಲೋಕಸೇವಾ ಆಯೋಗವಲ್ಲದೆ ಲೋಕೋಪಯೋಗಿ, ಇಂಧನ, ಉನ್ನತ ಶಿಕ್ಷಣ, ಗೃಹ ಇಲಾಖೆ ಸೇರಿದಂತೆ ಪ್ರಮುಖ ಇಲಾಖೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನೇಮಕಾತಿ ನಡೆದಿದೆ.

ಕೆಲವು ಪ್ರಕರಣಗಳಲ್ಲಿ ಹಗರಣ ನಡೆದಿದ್ದರೂ, ಅವು ಬಯಲಾಗಿಲ್ಲ. ಇಂತಹ ಭ್ರಷ್ಟಾಚಾರಗಳಿಗೆ ಕಡಿವಾಣ ಹಾಕಲು ಕೇಂದ್ರ ಮುಂದಾಗಿದೆ. ಪಿಎಸ್ಐ ಹಗರಣ ಹಾಗೂ ಗುತ್ತಿಗೆ ನೀಡುವಲ್ಲಿ ಕಮೀಷನ್ ಇಡೀ ರಾಷ್ಟ್ರವನ್ನು ಗಮನ ಸೆಳೆದು ಬಿಜೆಪಿ ಪಕ್ಷಕ್ಕೆ ಕಪ್ಪು ಚುಕ್ಕೆ ಇಟ್ಟಿತ್ತು.

## ಲಲಿತಾ ಇಂಟರ್‌ನ್ಯಾಷಿನಲ್ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಜು. 23 - ಸಿ.ಬಿ.ಎಸ್.ಇ 10ನೇ ತರಗತಿ ಪರೀಕ್ಷೆಯಲ್ಲಿ ನಗರದ ಲಲಿತಾ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಶಾಲೆಗೆ ಶೇ.100ರಷ್ಟು ಫಲಿತಾಂಶ ಬಂದಿದೆ. ಒಟ್ಟು 36 ವಿದ್ಯಾರ್ಥಿಗಳಲ್ಲಿ 10 ಅತ್ಯುನ್ನತ ಶ್ರೇಣಿ, 22 ಪ್ರಥಮ ಶ್ರೇಣಿ, ನಾಲ್ವರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಪ್ರಾರ್ಥನಾ ಎಸ್. ಶೇ.95 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಅಧ್ಯಕ್ಷ ಇ.ಆರ್. ಶಶಿಕಲಾ, ಕಾರ್ಯದರ್ಶಿ ಡಾ. ರವಿರಾಜ್ ಎಂ.ವಿ. ಅಭಿನಂದಿಸಿದ್ದಾರೆ.

# 'ದೇಗುಲಗಳ ದಾರಿ' ಪುಸ್ತಕ ಲೋಕಾರ್ಪಣೆ



**ಕೊಮಾರನಹಳ್ಳಿ**

ಮಲೇಬೆನ್ನೂರು, ಜು.23- ಅವಸಾನದ ಅಂಚಿನಲ್ಲಿರುವ ಪ್ರಾಚೀನ ಪರಂಪರೆ ಸಾರುವ ಪುರಾತನ ದೇವಾಲಯಗಳ ಕುರಿತಾದ ಪುಸ್ತಕ ಬರೆಯುವುದು ಕಷ್ಟದ ಕೆಲಸ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಡಾ. ವಿ. ಜಯರಾಮಯ್ಯ ಹೇಳಿದರು.

ಕೊಮಾರನಹಳ್ಳಿಯ ಶ್ರೀ ರಂಗನಾಥಾಶ್ರಮದಲ್ಲಿ ಬೆಂಗಳೂರಿನ ದೂರವಾಣಿ ನೌಕರರ ಪ್ರಾಚೀನ ದೇವಾಲಯಗಳ ಹವ್ಯಾಸಿ ವೀಕ್ಷಣಾ ವಿಭಾಗದ ಕೆಂಗೇರಿ ಚಕ್ರಪಾಣಿ ಅವರು ರಚಿಸಿರುವ 'ದೇಗುಲಗಳ ದಾರಿ' (ಸಂಪುಟ -5) ಮತ್ತು ಎ.ಎಸ್.ಶ್ರೀನಿವಾಸಮೂರ್ತಿ ಅವರು ರಚಿಸಿರುವ 'ಶಿಲ್ಪಕಲಾ ದೇವಾಲಯಕ್ಕೆ ದಾರಿ' ಎಂಬ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಪುಸ್ತಕ ಪ್ರವಾಸಿಗರಿಗೆ ದಾರಿದೀಪ ಪ್ರವಾಸಿಗರಿಗೆ ಅನುಕೂಲವಾಗಲಿದೆ. ಸರಳ ಆಡುಭಾಷೆ ಸಾಹಿತ್ಯ ಬಳಸಿ ಪುಸ್ತಕ ಬರೆದವರಿಗೆ ಕೃತಜ್ಞತೆ ಅರ್ಪಿಸಿದರು.

ಶ್ರೀ ರಂಗನಾಥಾಶ್ರಮದ ಕುಂದೂರು ನಾಡಿಗ್ ರಂಗನಾಥರಾವ್ ಬಿಡುಗಡೆ ಮಾಡಿ, ದೇವಾಲಯ ಕುರಿತ ಹೊತ್ತಿಗೆ ಪ್ರವಾಸಿಗರಿಗೆ ಅನುಕೂಲವಾಗಲಿದೆ. ದೇಗುಲದ ಕುರಿತು ಬರೆದ ಕನ್ನಡ ಪುಸ್ತಕ ಕೊಂಡು ಓದಿ ಎಂದು ಓದುಗರಿಗೆ ಕೋರಿದರು.

ಸಾಹಿತ್ಯ ಪ್ರೇಮಿ ಎಲೆಬೇತೂರು ಬಸವರಾಜ ದೇವಾಲಯದ ಪುಸ್ತಕ ಬರೆದ ದೂರವಾಣಿ ನೌಕರರ ಬಳಗಕ್ಕೆ ಅಭಿನಂದಿಸಿದರು.

ಪುಸ್ತಕ ರಚಿಸಿದ ಕೃತಿಕಾರರು ದೇವಾಲಯಗಳ ಮಹತ್ವ, ಪುರಾತನ ದೇವಾಲಯ ಸಂರಕ್ಷಣೆ ಕುರಿತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಿಂತಾಮಣಿ ಕೊಡ್ಲಿಕೆರೆ ಕಾರ್ಯ ಶ್ಲಾಘಿಸಿದರು.

ದೂರವಾಣಿ ಇಲಾಖೆ ನಿವೃತ್ತ ಸಹಾಯಕ ಮಹಾ ಪ್ರಭಂಧಕ ಗಣಪತಿಭಟ್ ಅಧ್ಯಕ್ಷತೆ ವಹಿಸಿ, ಪುರಾತನ ದೇಗುಲಗಳನ್ನು ಮುಂದಿನ ತಲೆಮಾರಿಗೆ ಉಳಿಸಿ ಬೆಳೆಸಿ ಮಾಹಿತಿ ನೀಡಿ ಸಂರಕ್ಷಿಸಬೇಕು ಎಂದರು.

ಸಾಹಿತಿ ಸುಶೀಲಾದೇವಿ, ಸತೀಶ್ ಮಿಯ್ಯಾಪುರ ಸುಧಾ ರಾಜೇಂದ್ರ ಹಂಪಿ, ಷಡಾಕ್ಷರಪ್ಪ, ಅನೂಪ್, ಶಿಕ್ಷಕ ಹಾಗೂ ಬರಹಗಾರ ಹಾಲಿವಾಣದ ಟಿ. ಶಿವಕುಮಾರ್ ಸೇರಿದಂತೆ ಸಂಘಟನೆಯ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜನಾರ್ಧನ್ ಸ್ವಾಗತಿಸಿದರು. ಚಂದ್ರಪ್ಪ ವಂದಿಸಿದರು.

## ವೈದ್ಯಕೀಯ ಸೀಟಿಗಾಗಿ 65 ಕೋಟಿ ರೂ. ಅಕ್ರಮ

ಮುಂಬೈ, ಜು. 23 – ವೈದ್ಯಕೀಯ ಸೀಟು ಕೊಡಿಸುವುದಾಗಿ ಹೇಳಿ ಮಹಾರಾಷ್ಟ್ರದ ಎಸ್.ಸಿ.ಎಸ್.ಇ.ಎಸ್. ಸಂಸ್ಥೆ ಹಾಗೂ ಇತರೆ ಆರೋಪಿಗಳು 65 ಕೋಟಿ ರೂ. ಅಕ್ರಮವಾಗಿ ಪಡೆದಿರುವುದಾಗಿ ಜಾರಿ ನಿರ್ದೇಶನಾಲಯ ಆರೋಪ ಪಟ್ಟಿ ದಾಖಲಿಸಿದೆ.

350 ಅಭ್ಯರ್ಥಿಗಳಿಂದ ಈ ಹಣ ಸಂಗ್ರಹಿಸಲಾಗಿತ್ತು. ಈ ಹಣ ಬಳಸಿಕೊಂಡು ಆಸ್ತಿಗಳನ್ನು ಖರೀದಿಸಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಎಂ.ಬಿ.ಬಿ.ಎಸ್. ಕೋರ್ಸ್ ನಡೆಸಲು ಅನುಮತಿ ಹೊಂದಿರದೇ ಇದ್ದರೂ ಸಹ ಕೊಲ್ಲಾಪುರದ ಛತ್ರಪತಿ ಶಿವಾಜಿ ಎಜುಕೇಷನ್ ಸೊಸೈಟಿ ವಿದ್ಯಾರ್ಥಿಗಳಿಂದ ಹಣ ಪಡೆದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್.ಸಿ.ಎಸ್.ಇ.ಎಸ್.ನ ಮಾಜಿ ಕಾರ್ಯಕಾರಿ ಅಧ್ಯಕ್ಷ ಮಹದೇವ್ ದೇಶಮುಖ್ ಹಾಗೂ ಸಹೋದರ ಅಪ್ಪಾಸಾಹೇಬ್ ಎಂಬುವರನ್ನು ಬಂಧಿಸಲಾಗಿದೆ.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಜನರನ್ನು ಸ್ವಾವಲಂಬಿಗಳನ್ನಾಗಿಸಲು ಶ್ರಮಿಸುತ್ತಿದೆ



### ರಾಜನಹಳ್ಳಿಯ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಶಿವಶರಣೆ ಚನ್ನಮ್ಮ ತಾಯಿ ಬಣ್ಣನೆ

ಹರಿಹರ, ಜು. 23 - ಅಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ನಿಂತಿರುವ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಹತ್ತಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಅನುಷ್ಠಾನಿಸುತ್ತಿದೆ ಎಂದು ಮಣಕೂರು ಸಿದ್ಧಾರೂಢ ಗುರುದೇವಾಶ್ರಮದ ಶಿವಶರಣೆ ಚನ್ನಮ್ಮ ತಾಯಿ ಬಣ್ಣಿಸಿದರು.

ಹರಿಹರ ತಾಲ್ಲೂಕು ರಾಜನಹಳ್ಳಿಯ ಶ್ರೀ ವಾಲ್ಮೀಕಿ ಗುರುಪೀಠದ ಸಭಾಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಹರಿಹರ ತಾಲ್ಲೂಕು ಮತ್ತು ಶ್ರೀ ಸಾಮೂಹಿಕ ಸತ್ಯನಾರಾಯಣ ಪೂಜಾ ಸಮಿತಿ ರಾಜನಹಳ್ಳಿ ಇವರ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಪ್ರವಚನಕಾರ ರಾಗಿ ಭಾಗವಹಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಯೋಜನೆಯ ಪ್ರಾದೇಶಿಕ ನಿರ್ದೇಶಕಿ ಗೀತಾ ಬಿ. ಮಾತನಾಡಿ, ಸಾಮಾಜಿಕ ಸಾಮರಸ್ಯಗಳನ್ನು ಮೈಗೂಡಿಸಿಕೊಂಡು ಜನರು ಸಂಘಟಿತರಾಗಿ ಬದುಕಲಿ ಎಂಬ ಸದುದ್ಧೇಶದಿಂದ ಸಾಮೂಹಿಕ ಧಾರ್ಮಿಕ ಕಾರ್ಯಗಳನ್ನು ಯೋಜನೆಯ ವತಿಯಿಂದ ಅನುಷ್ಠಾನಿಸಲಾಗುತ್ತಿದೆ. ಇಂತಹ ಪೂಜೆಗಳಲ್ಲಿ ನಮ್ಮಲ್ಲಿರುವ ಕೀಳು ಕಾಮನೆಗಳನ್ನು ಬಿಟ್ಟು ಸಂಸ್ಕಾರಗಳನ್ನು ರೂಢಿಸಿಕೊಳ್ಳುವಂತಾಗಬೇಕು. ಅಂದಾಗ ಮಾತ್ರ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಸಾರ್ಥಕವಾಗುತ್ತದೆ ಎಂದು ತಿಳಿಸಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್, ಹೆಗ್ಗಡೆಯವರು ತಮ್ಮ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ದೇಶಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ. ಅವರು ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿರುವುದು ಎಲ್ಲರಿಗೂ ಹೆಮ್ಮೆ ತರುವಂತಹ ವಿಷಯ ಎಂದು ಹೇಳಿದರು.

ಮಾಜಿ ಶಾಸಕ ಬಿ.ಪಿ.ಹರೀಶ್ ಮಾತನಾಡಿ, ಸರ್ಕಾರ ಮಾಡುವ ಕೆಲಸವನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿದೆ ಎಂದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶಿವಕುಮಾರ್ ರಾಜನಹಳ್ಳಿ ಮಾತನಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಚೈತ್ರಾ ಲಂಕೇಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಯೋಜನೆಯ ಜಿಲ್ಲಾ ನಿರ್ದೇಶಕ ವಿ.ವಿಜಯಕುಮಾರ್ ನಾಗನಾಳ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹೊನ್ನಾಳಿ ಬಾಬಣ್ಣ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಆಡಳಿತಾಧಿಕಾರಿ ಟಿ.ಓಬಳಪ್ಪ, ವ್ಯವಸ್ಥಾಪಕ ಬಿ. ಭೀಮಣ್ಣ ಗ್ರಾಮದ ಹಿರಿಯರಾದ ಗೋವಿಂದಪ್ಪ ನೆಶ್ವಿ, ಕರೀಂಸಾಬ್, ತಿಪ್ಪಣ್ಣ ಹಾಲಿನವರ, ಶರತ್‌ಕುಮಾರ್ ಗೋದಪ್ಪನವರ, ಜಿ.ಹೆಚ್. ಸಿದ್ದಾರೂಢ, ನಾಗರಾಜ್, ಗೂಢಾಚಾರಿ, ವೀರಬಸಯ್ಯ, ಪೂಜಾರ್ ಹನುಮಂತಪ್ಪ, ರೇವಣಸಿದ್ದಪ್ಪ ನೆಶ್ವಿ, ವಕೀಲ ಸುಭಾಷ್ ಚಂದ್ರಬೋಸ್, ಗ್ರಾಮ ಪಂಚಾಯಿತಿ ಸರ್ವ ಸದಸ್ಯರುಗಳು, ಒಕ್ಕೂಟದ ಅಧ್ಯಕ್ಷರುಗಳಾದ ಸ್ವಪ್ನ, ಮಾಲತೇಶ್ ಮೈಲಮ್ಮನವರ, ಮುಖ್ಯ ಶಿಕ್ಷಕ ಕೆ.ಎನ್.ಚಕ್ರಸಾಲಿ ಉಪಸ್ಥಿತರಿದ್ದರು.

ಹರಿಹರ ಶ್ರೀಧರ ಭಟ್ಟ ಮತ್ತು ಸಂಗಡಿಗರು ಪೂಜಾ ಕಾರ್ಯ ನೆರವೇರಿಸಿದರು. 169 ಜನ ವ್ರತಧಾರಿಗಳು ಸಾಮೂಹಿಕ ಪೂಜೆಯಲ್ಲಿ ಕುಟುಂಬದವರೊಂದಿಗೆ ಕುಳಿತು ಪೂಜಾ ಕಾರ್ಯದಲ್ಲಿ ಭಾಗಿಯಾದರು.

ಸೇವಾಪ್ರತಿನಿಧಿ ಪುಷ್ಪಾ ಪ್ರಾರ್ಥಿಸಿದರು. ಯೋಜನಾಧಿಕಾರಿ ಗಣಪತಿ ಮಾಳಂಜಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಮೇಲ್ವಿಚಾರಕ ಸಂತೋಷ್ ಕಾರ್ಯಕ್ರಮ ನಿರೂಪಿಸಿದರು. ಮೇಲ್ವಿಚಾರಕ ಪ್ರಸನ್ನ ವಂದಿಸಿದರು.

## ಚಿರಸ್ಮರಣೆ



**ಶ್ರೀಮತಿ ಮಠದ ಕೊಟ್ರಮ್ಮ ಹಾಲಯ್ಯ, ಬಸಾಪುರ**
(1923-2010)

*ನೀವು ಲಿಂಗೈಕ್ಯರಾಗಿ*
*ಹನ್ನೆರಡು ವರ್ಷಗಳು ಕಳೆದವು,*
*ನೀವು ಕಟ್ಟಿಕೊಟ್ಟ ಸೂರಿನಡಿಯಲ್ಲಿ,*
*ನೀವು ಬೆಳಗಿಸಿಟ್ಟು*
*ಹೋದ ದೀಪದಡಿಯಲ್ಲಿ, ನೀವು ಕಟ್ಟಿಟ್ಟು ಹೋದ*
*ಬುತ್ತಿಯನ್ನುಣ್ಣುತ್ತಾ, ನಿಮ್ಮ ಸ್ಮರಣೆಯಲ್ಲಿರುವ...*

- ಶ್ರೀಮತಿ ಗುರುಸಿದ್ದಮ್ಮ ಶಿವಮೂರ್ತಯ್ಯ
- ಶ್ರೀಮತಿ ಅನ್ನಪೂರ್ಣ ವಾಮದೇವಯ್ಯ
- ಶ್ರೀಮತಿ ಕಮಲಮ್ಮ ಶ್ರೀ ಬಿ.ಎಂ. ಕೊಟ್ರಯ್ಯ
- ಶ್ರೀ ಬಾ.ಮ. ಬಸವರಾಜಯ್ಯ

ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಬಂಧು-ಬಾಂಧವರು.

## ಶ್ರೀಮತಿ ಎಂ.ಪಿ. ಶಾಂತ ನಿಧನ



ದಾವಣಗೆರೆ, ಕಿರುವಾಡಿ ಲೇಔಟ್ ವಾಸಿ
ಶ್ರೀ ಮೆರವಣಿಗೆ ಪಂಚಾಕ್ಷರಪ್ಪನವರ ಧರ್ಮಪತ್ನಿ

**ಶ್ರೀಮತಿ ಎಂ.ಪಿ. ಶಾಂತ**

ಇವರು ದಿನಾಂಕ 23.7.2022ರ ಶನಿವಾರ ರಾತ್ರಿ 11.40ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತಿ, ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.7.2022ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**

**ಮೊ. 94482 37172, 74113 24088**

## ಕೊಂಪೇರ ಗುರುಬಸಪ್ಪ ನಿಧನ




ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ವಾಸಿ ಕೊಂಪೇರ ಗುರುಬಸಪ್ಪ (72) ಅವರು ದಿನಾಂಕ 23.7.2022ರ ಶನಿವಾರ ಮಧ್ಯಾಹ್ನ 12.45 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.7.2022ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಕಾರಿಗನೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

## ನಗರದಲ್ಲಿ ಇಂದು ಕುರುಬ ಸಮಾಜದ ಸಭೆ

ಸಿದ್ದರಾಮಯ್ಯನವರ 75 ನೇ ಅಮೃತ ಮಹೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 12 ಗಂಟೆಗೆ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಕುರುಬ ಸಮಾಜದ ಪೂರ್ವಭಾವಿ ಸಭೆಯನ್ನು ನಗರ ಕುರುಬ ಸಂಘದ ಕಾರ್ಯದರ್ಶಿ ಬಿ. ಷಣ್ಮುಖಪ್ಪ ಅವರ ನೇತೃತ್ವದಲ್ಲಿ ಕರೆಯಲಾಗಿದೆ ಎಂದು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ನಿರ್ದೇಶಕ ಬಿ.ಲಿಂಗರಾಜ್ ತಿಳಿಸಿದ್ದಾರೆ.

## ವಿಜಯನಗರ ಜಿಲ್ಲಾ ದೈವಜ್ಞ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಮಹಾಬಲೇಶ್



ಹೂವಿನಹಡಗಲಿ, ಜು.23 - ವಿಜಯನಗರ ಜಿಲ್ಲಾ ದೈವಜ್ಞ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಹೂವಿನಹಡಗಲಿ ಎನ್.ಡಿ. ಮಹಾಬಲೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೌರವಾಧ್ಯಕ್ಷರಾಗಿ ಮಂಜುನಾಥ ಜನ್ನು ಕೂಡ್ಲಿಗಿ, ಉಪಾಧ್ಯಕ್ಷರಾಗಿ ಉಲ್ಲಾಸ ರೇವಣಕರ್ ಕೊಟ್ಟೂರು ರಾಘವೇಂದ್ರ ಕುರುತಡಕರ್ ಹೊಸಪೇಟೆ, ಖಜಾಂಚಿ ಲಕ್ಷ್ಮಿ ಕಾಂತ್ ಕುಡತರಕರ್, ಹೊಸಪೇಟೆ ಕಾರ್ಯದರ್ಶಿ ಎಂ. ನಾಗರಾಜ ಜನ್ನು ಹಗರಿಬೊಮ್ಮನಹಳ್ಳಿ, ಸಹ ಕಾರ್ಯದರ್ಶಿ ಮಾರುತಿ ಎಂ. ರಾಯ್ಕರ್ ಹಗರಿಬೊಮ್ಮನಹಳ್ಳಿ, ನಿರ್ದೇಶಕರು ನಾಗರಾಜ್ ದಿವಾಕರ, ರಾಘವೇಂದ್ರ ರಾಯ್ಕರ್ ಹೂವಿನಹಡಗಲಿ. ರಾಮಚಂದ್ರ ರೇವಣಕರ ಹರಪನಹಳ್ಳಿ, ಮಂಜುನಾಥ ರೇವಣಕರ ಹಗರಿಬೊಮ್ಮನಳ್ಳಿ, ಶ್ರೀಧರ ಗೋಕರ್ಣಕರ ಹೊಸಪೇಟೆ ಪ್ರಕಾಶ ಕೊಟ್ಟೂರು, ಮಾರುತಿ ರಾಯ್ಕರ್ ಕೂಡ್ಲಿಗಿ, ರಾಜು ಕೊಟ್ಟೂರು ಅವರುಗಳು ಗಂಗಾವತಿಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಕೈಲಾಸ ಸಮಾರಾಧನೆ



ದಾವಣಗೆರೆ ಸಿಟಿ ಶಿವಕುಮಾರ ಸ್ವಾಮಿ ಬಡಾವಣೆ ವಾಸಿಗಳಾದ
**ಶ್ರೀ ಗುಡುದಪ್ಪರ ಗುರುಬಸಪ್ಪ**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 20.7.2022ನೇ ಬುಧವಾರ ರಾತ್ರಿ 10.50ಕ್ಕೆ ನನ್ನ ಧರ್ಮಪತ್ನಿಯಾದ

**ಶ್ರೀಮತಿ ಕೆ.ಸಿ. ಸುಧಾ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 24.7.2022ನೇ ಭಾನುವಾರ ಬೆಳಿಗ್ಗೆ 12 ಗಂಟೆಗೆ ದಾವಣಗೆರೆಯ ಶಿವಕುಮಾರಸ್ವಾಮಿ ಬಡಾವಣೆಯ 'ಸುರಕ್ಷಿತ' 1ನೇ ಮೇನ್, 2ನೇ ಕ್ರಾಸ್, 1ನೇ ಹಂತದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು**
**ಗುರುಬಸಪ್ಪ ಮತ್ತು ಮಕ್ಕಳು, ಗುಡುದಪ್ಪರ ವಂಶಸ್ಥರು**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.7.2022ರ ಶನಿವಾರ ನಿಧನರಾದ ಕತ್ತಲಗೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಹಾಲಿ ಅಧ್ಯಕ್ಷರೂ, ಶಿವಮೊಗ್ಗ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷರಾಗಿದ್ದ ಕತ್ತಲಗೆರೆಯ **ಕೆ.ಜಿ ರೇವಣಸಿದ್ದೇಶ್ವರ**

ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗಕ್ಕೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

**ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗ**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.7.2022ರ ಶನಿವಾರ ನಿಧನರಾದ
ನಮ್ಮ ಸಹಕಾರ ಬ್ಯಾಂಕಿನ ಮಾಜಿ ಅಧ್ಯಕ್ಷರೂ, ಶಿವಮೊಗ್ಗ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷರೂ ಆದ ಕತ್ತಲಗೆರೆಯ

**ಶ್ರೀ ಕೆ.ಜಿ ರೇವಣಸಿದ್ದೇಶ್ವರ**

ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುವ

**ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರು.**
**ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸಿಇಓಗಳು**

**ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ.**

# ಮಹಿಳೆಯ ಸ್ವಾವಲಂಬಿ ಬದುಕು ಆರ್ಥಿಕ ಸದೃಢತೆಗೆ ಬೆನ್ನೆಲುಬಾಗಲಿ



### ಶಾಸಕ ಕರುಣಾಕರ ರೆಡ್ಡಿ ಅಭಿಮತ

ಹರಪನಹಳ್ಳಿ, ಜು.23- ಮಹಿಳೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳುವ ಮೂಲಕ ಕುಟುಂಬದ ಆರ್ಥಿಕ ಸದೃಢತೆಗೆ ಬೆನ್ನೆಲುಬಾಗಲಿ ಎಂಬ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ. ಅವುಗಳನ್ನು ಸಮರ್ಪಕವಾಗಿ ಸದ್ಬಳಕೆ ಮಾಡಿಕೊಳ್ಳುವಂತೆ ಶಾಸಕ ಜಿ. ಕರುಣಾಕರ ರೆಡ್ಡಿ ಕರೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿ ಆವರಣದ ಸಾಮರ್ಥ್ಯಸೌಧದ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ತಾಲ್ಲೂಕು ಪಂಚಾಯ್ತಿ ಆಶ್ರಯದಲ್ಲಿ ಅಮೃತ ಸ್ವ ಸಹಾಯ ಕಿರು ಉದ್ಯಮಿಗಳ ಯೋಜನೆ ಅಡಿ ಮಹಿಳಾ ಸ್ವಸಹಾಯ ಗುಂಪುಗಳ 3 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಸ್ವಾತಂತ್ರ್ಯದ 75ನೇ ವರ್ಷದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಸರ್ಕಾರ ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಮೂಲಕ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಎಂದು ಹೇಳಿದರು.

ಯೋಜನೆಗಳು ಕೇವಲ ದಾಖಲೆಗಳಲ್ಲಿ ಮಾತ್ರ ವಿನಿಯೋಗವಾಗಲು ಅವಕಾಶ ನೀಡದೆ, ನೈಜವಾಗಿ ಸದ್ಬಳಕೆ ಆಗಬೇಕು. ಹಾಗಾದಾಗ ಮಾತ್ರ, ಸಾರ್ಥಕವಾಗುತ್ತದೆ. ಜತೆಗೆ, ಮಹಿಳೆಯರ ಸ್ವಾವಲಂಬಿ ಬದುಕಿಗೂ ಹೊಸಚೈತನ್ಯ ನೀಡುತ್ತದೆ ಎಂದರು.

ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ 35 ಸ್ವ ಸಹಾಯ ಸಂಘಗಳಿಗೆ ತಲಾ 1ಲಕ್ಷ ರೂ. ಅನುದಾನ ಬಿಡುಗಡೆಯಾಗಿದೆ. ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಿಕೊಳ್ಳುವಂತೆ ಶಾಸಕರು ಕರೆ ನೀಡಿದರು.

ಪುರಸಭಾ ಅಧ್ಯಕ್ಷ ಎಚ್.ಎಂ. ಅಶೋಕ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮಹಿಳೆಯರನ್ನು ಮುಖ್ಯವಾಹಿನಿಗೆ ಕೊಂಡೊಯ್ಯುವ ಹಿನ್ನೆಲೆಯಲ್ಲಿ ವಿಶೇಷ ಯೋಜನೆಗಳನ್ನು ಜಾರಿ ಮಾಡಿದೆ. ಅವುಗಳ ಪ್ರಯೋಜನ ಪಡೆಯುವ ಮೂಲಕ ನೆಮ್ಮದಿಯ ಬದುಕು ಕಟ್ಟಿಕೊಳ್ಳುವಂತೆ ಮನವಿ ಮಾಡಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ ಪ್ರಕಾಶ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹರೀಶ್, ಅಂಗನವಾಡಿ ಕಾರ್ಯಕರ್ತೆಯರ ಮೇಲ್ವಿಚಾರಕಿ ರೇಣುಕಾ ಹಾಲೇಶ್ ಹಾಗು ಇತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# 1.80 ಕೋಟಿ ರೂ. ರಸ್ತೆ ಕಾಮಗಾರಿ ಕಳಪೆ : ಮಾಜಿ ಶಾಸಕ ರಾಜೇಶ್



ಜಗಳೂರು, ಜು.23- ತಾಲ್ಲೂಕಿನ ಯರ್ಲಕಟ್ಟೆ ಗ್ರಾಮದಲ್ಲಿ ಸುಮಾರು 1.80 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿ ಸಂಪೂರ್ಣವಾಗಿ ಕಳಪೆಯಾಗಿದೆ ಎಂದು ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಗಂಭೀರ ಆರೋಪ ಮಾಡಿದ್ದಾರೆ.

ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಕಳಪೆ ಕಾಮಗಾರಿ ರಸ್ತೆಯ ಪರಿಶೀಲನೆ ನಡೆಸಿ ಮಾತನಾಡಿದಅವರು,ಡಾಂಬರೀಕರಣಗೊಂಡು ಕೇವಲ ಕೆಲವೇ ದಿನಗಳಲ್ಲಿ ಡಾಂಬರ್ ಸಂಪೂರ್ಣವಾಗಿ ಕಿತ್ತು ಹೋಗಿದೆ. ಶಾಸಕರು, ಇಂಜಿನಿಯರುಗಳ ನಿರ್ಲಕ್ಷ್ಯದಿಂದಾಗಿ ಸುಮಾರು ಕೋಟಿ ರೂ. ವೆಚ್ಚದ ರಸ್ತೆ ಕಳಪೆಯಾಗಿದೆ ಎಂದು ದೂರಿದರು. ತಾಲ್ಲೂಕಿನಾದ್ಯಂತ ಹಲವಾರು ಕಾಮಗಾರಿಗಳನ್ನು ಕೇವಲ ಒಬ್ಬನೇ ಗುತ್ತಿಗೆದಾರನಿಗೆ ಸಿಂಗಲ್ ಟೆಂಡರ್ ಮೂಲಕ ನೀಡಿರುವುದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ ಎಂದು ತಿಳಿಸಿದರು.

ಶಾಸಕರೊಂದಿಗೆ ಕೆಪಿಸಿಸಿ ಎಸ್ಟಿ ಘಟಕದ ಅಧ್ಯಕ್ಷ ಕೆ.ಪಿ.ಪಾಲಯ್ಯ, ತಾ.ಪಂ ಮಾಜಿ ಅಧ್ಯಕ್ಷ ಯು.ಜಿ.ಶಿವಕುಮಾರ್ ಗ್ರಾ.ಪಂ ಸದಸ್ಯರಾದ ಮುರಿಗೆಪ್ಪ, ಆಶಾ ಸುರೇಶ್, ಬಸವರಾಜಪ್ಪ, ಮುಖಂಡರಾದ ಶಿವಮೂರ್ತಿ, ಹಾಲೇಶ್, ಬಸವರಾಜಪ್ಪ, ಕಾಂಗ್ರೆಸ್ ಮುಖಂಡರಾದ ಬಿ.ಲೋಕೇಶ್, ಎಂ.ವೆಂಕಟೇಶ್ ಮುಂತಾದವರು ಇದ್ದರು.

## ಸ್ವಾತಂತ್ರ್ಯ ಹೋರಾಟಗಾರರಿಗೆ ಡಿಜಿಟಲ್ ನಮನ : ಪ್ರಧಾನಿ ಕರೆ

ನವದೆಹಲಿ, ಜು. 23 – ಸ್ವಾತಂತ್ರ್ಯ ಹೋರಾಟಗಾರರಿಗೆ ಡಿಜಿಟಲ್ ಮೂಲಕ ನಮನ ಸಲ್ಲಿಸುವಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಸ್ವಾತಂತ್ರ್ಯದ 75ನೇ ವರ್ಷಾಚರಣೆಯ ಹಿನ್ನೆಲೆಯಲ್ಲಿ digitaltribute.in ವೆಬ್ ತಾಣದ ಮೂಲಕ ಸ್ವಾತಂತ್ರ್ಯ ಯೋಧರಿಗೆ ನಮನ ಸಲ್ಲಿಸುವಂತೆ ಪ್ರಧಾನಿ ಕರೆ ನೀಡಿದ್ದಾರೆ. ದೆಹಲಿಯ ಸೆಂಟ್ರಲ್ ಪಾರ್ಕ್‌ನಲ್ಲಿ ಗಗನ ದೀಪವೊಂದನ್ನು ಸ್ಥಾಪಿಸಲಾಗಿದೆ. ಪ್ರತಿ ಬಾರಿ ನಮನ ಸಲ್ಲಿಸಿದಾಗಲೂ ಈ ಡಿಜಿಟಲ್ ಜ್ಯೋತಿ ಬೆಳಗಲಿದೆ. ಈ ವಿಶಿಷ್ಟ ಅಭಿಯಾನದಲ್ಲಿ ಪಾಲ್ಗೊಳ್ಳಿ ಎಂದವರು ಹೇಳಿದ್ದಾರೆ.

## ಆಸ್ತಿ ವಿವರ ಪರಿಶೀಲನೆಯ ವ್ಯವಸ್ಥೆ : ಹೈಕೋರ್ಟ್ ಸೂಚನೆ

ಬೆಂಗಳೂರು, ಜು. 23 – ಸಾರ್ವಜನಿಕರು ಎಲ್ಲಾ ರೀತಿಯ ಆಸ್ತಿ ವಿವರಗಳನ್ನು ಪರಿಶೀಲಿಸಲು ಸಾಧ್ಯವಾಗುವ ವ್ಯವಸ್ಥೆ ರೂಪಿಸಬೇಕೆಂದು ಕರ್ನಾಟಕ ಹೈಕೋರ್ಟ್ ನಿರ್ದೇಶನ ನೀಡಿದೆ. ವಿವಿಧ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳ ನಡುವೆ ಈ ವಿಷಯದಲ್ಲಿ ಸಮನ್ವಯತೆ ತರಲು ಐ.ಎ.ಎಸ್. ಅಧಿಕಾರಿಯೊಬ್ಬರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವಂತೆಯೂ ಹೈಕೋರ್ಟ್ ತಿಳಿಸಿದೆ. ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಯೋಜನಾ ಪ್ರಾಧಿಕಾರಗಳು, ನಗರ ಪಾಲಿಕೆಗಳು ಮತ್ತಿತರೆ ಸಂಸ್ಥೆಗಳ ಜೊತೆಗೂಡಿ ಈ ಕಾರ್ಯ ನಿರ್ವಹಿಸಬೇಕೆಂದು ಹೈಕೋರ್ಟ್ ಹೇಳಿದೆ.

## ಹರಿಹರ : ಎಂ.ಕೆ.ಇ.ಟಿ.ಎಲ್.ಕೆ. ಶಾಲೆಗೆ ಉತ್ತಮ ಫಲಿತಾಂಶ



ಹರಿಹರ, ಜು.23- ನಗರದ ಎಂ.ಕೆ.ಇ.ಟಿ. ಎಲ್.ಕೆ. ಆಂಗ್ಲ ಮಾಧ್ಯಮ ಶಾಲೆಗೆ 2021-22ನೇ ಸಾಲಿನ ಸಿ.ಬಿ.ಎಸ್.ಇ. 10ನೇ ತರಗತಿ ಪರೀಕ್ಷೆಯಲ್ಲಿ 29 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ, 58 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ.

ಕುಮಾರಿ ಸಹನಾ ಪಿ.ಎನ್. 484/500 (96.8%) ಅಂಕಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ದ್ವಿತೀಯ ಸ್ಥಾನವನ್ನು ಇಬ್ಬರು ವಿದ್ಯಾರ್ಥಿಗಳಾದ ನಿತೀಶ್ ಬಿ. ಜುಮನಾಳ್ ಹಾಗೂ ಶಿವಕುಮಾರ್ ಕೆ.ಸಿ. 473/500 (94.6%) ಅಂಕಗಳನ್ನು ಪಡೆದಿರುತ್ತಾರೆ. ತೃತೀಯ ಸ್ಥಾನವನ್ನು ದಿವ್ಯಾ ಬಿ. ಭಂಡಾರಿ 472/500 (94.4%) ಅಂಕಗಳನ್ನು ಪಡೆದಿರುತ್ತಾರೆ. ಉಳಿದಂತೆ ವಿಶ್ವಾಸ್ ಅಂಗಡಿ (93.2%) ವಿನಾಯಕ ಬಿ.ಆರ್. (93%) ಸುಪ್ರಿತ್ ಎನ್. (91.6%) ನಂದನ್ ಚಿಂಚಳಿ (91.6%) ಕೊಟ್ರೇಶ್ ಕೆ. (91.4%) ಸಹನಾ ಯು.ಪಿ. (91.2%) ದೀಕ್ಷಾ ಕೆ.ಸಿ. (91%) ಅಂಕಗಳನ್ನು ಗಳಿಸಿದ್ದಾರೆ.


**ಬೇಕಾಗಿದ್ದಾರೆ**

ಕುಮಾರ್ ಜ್ಯೂವೆಲರ್ಸ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್‌ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ. ಸೂಕ್ತ ಪರಿಚಯಸ್ಥರೊಂದಿಗೆ ಸಂಪರ್ಕಿಸಿ.

ಕುಮಾರ್ ಜ್ಯೂವೆಲರ್ಸ್, ಮಂಡಿಪೇಟೆ, ದಾವಣಗೆರೆ.
75369 16916, 88612 05481

**ಕೆಲಸಕ್ಕೆ ಬೇಕಾಗಿದ್ದಾರೆ**

* ಪ್ರಿಂಟರ್ ಸರ್ವೀಸ್
* ಎಲೆಕ್ಟ್ರೀಷಿಯನ್ * ಸಿಸ್ಟಮ್ ಸರ್ವೀಸ್

ಆರ್. ಕಂಪ್ಯೂಟರ್ಸ್
ನಂ. 3473/3, ಡೆಂಟಲ್ ಕಾಲೇಜು ರೋಡ್, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ - 577 004
87221 13803, 84311 11921
ಅನುಭವವಿರುವವರಿಗೂ ಹಾಗೂ ಅನುಭವ ಇಲ್ಲದವರಿಗೂ ಆದ್ಯತೆ ನೀಡಲಾಗುವುದು.

**DRONA EDU**
**(E-Learning App)**

ಹರಿಹರ, ಚನ್ನಗಿರಿ, ಜಗಳೂರು, ಹೊನ್ನಾಳಿ ತಾಲ್ಲೂಕುಗಳಿಗೆ ಮಾರ್ಕೆಟಿಂಗ್ ಎಕ್ಸ್‌ಪೀರಿಯನ್ಸ್‌ವುಳ್ಳ ತಾಲ್ಲೂಕು ಮ್ಯಾನೇಜರ್‌ಗಳು ಬೇಕಾಗಿದ್ದಾರೆ.
ಆಕರ್ಷಕ ಸಂಬಳ + Incentive

96111 54051, 79005 30053

**ವಿದೇಶ ಪ್ರಯಾಣ- ಶುಭ ಹಾರೈಕೆ**



ಫ್ರಾನ್ಸ್ ದೇಶದಲ್ಲಿ ಕೆಲಸ ಸಿಕ್ಕಿರುವ ನಿಮಿತ್ತ
ದಿನಾಂಕ 25.7.2022ರಂದು ವಿದೇಶ ಪ್ರಯಾಣ ಕೈಗೊಳ್ಳುತ್ತಿರುವ

**ಕಿರಣ ಕೆ. ಜಾಧವ್**

ಇವರ ವಿದೇಶ ಪ್ರವಾಸ ಸುಖಕರವಾಗಿರಲೆಂದು
ಶುಭಾ ಕೋರುತ್ತಿರುವವರು


- ಶ್ರೀಮತಿ ಭವಿತ ಮತ್ತು ವಿಜಯಕುಮಾರ್ ಸಾವಂತ್ ಮತ್ತು ಕುಟುಂಬ ವರ್ಗ
- ಶ್ರೀಮತಿ ಶೀಲ ಮತ್ತು ಹನುಂತರಾವ್ ಸಾವಂತ್ ಮತ್ತು ಕುಟುಂಬ ವರ್ಗ
- ಶ್ರೀಮತಿ ರಶ್ಮಿ ಮತ್ತು ಸಿದ್ದಲಿಂಗೇಶ್ವರ (ಸಿದ್ದು) ಸಾವಂತ್ ಮತ್ತು ಕುಟುಂಬ ವರ್ಗ
- ಶ್ರೀಮತಿ ಅನಿತ ಮತ್ತು ಮಾರುತಿರಾವ್ ಘಾಟ್ಗೆ, ದೂಡಾ ಸದಸ್ಯರು ಮತ್ತು ಕುಟುಂಬ ವರ್ಗ.
- ಎಸ್.ಎಸ್. ಆಟೋ ಲಿಂಕ್ಸ್, ಆರ್ಯ ಈಡಿಗರ ಹಾಸ್ಟೆಲ್ ಕಾಂಪ್ಲೆಕ್ಸ್, ಪಿ.ಬಿ ರಸ್ತೆ, ವಿನೋಬನಗರ, ದಾವಣಗೆರೆ.

**AMRITA VIDYALAYAM**
NATIONAL NETWORK OF BASED SCHOOLS
ಶ್ರದ್ಧಾವಾನ್ ಲಭತೇ ಜ್ಞಾನಮ್

1179/7, Nijalingappa Layout, Davangere
Ph.No. : 9844494879, 9535626702
Email : davangere@vidyalayam.amrita.edu.in
Affiliation No. : 830169



**HEARTY CONGRATULATIONS TO OUR 12th BATCH CLASS X: 2021-22**



Abhishek Aithal 97.4% (IT 10 0/100)
Amrutha A 97.4 % (Sanskrit 100/100)
Shreya D 96.8% | Shlok N B 95.4% | Likhitha R 95.2% | Jagruti T 95% | Amrutha R S Sankol 94.2% | Tejas Sogalad 94.2% | Dhanvith D 92% | K Ravindranath R 91.6% | Varshitha N A 90.8%
Varshitha C A 90.8% | Sujal Gowda 90.6% | Sunidhi P H 90.6% | Tejavardhana 90.6% | Parameshwari N H 90.2% | Deeraj N B 89.8% | Prajwal R S 88.6% | Mirza Murthaza 88.2% | Riya G R 87.8% | Thejaswini M G 87.8% | Sahil S A 87.2%
Ambuja P M 86.6% | Akash T R 86.6% | Mirza Musthafa 86.4% | Sujan Gowda 86.4% | Rishab Jadav 85.6% | Sujal H S 85.6% | Rahul N H 85% | Tulasi M Chavan 85% | Basanthkumar 84.8% | Sulaim Humera 84.6% | Shivam R Shet 84.4% | Nawaz Ahmed 84.4% | Chetan H S 84.2% | Yashika B S 84.2% | A S Achuth 84.2% | Khushubu 83.8%
Darshan H M 83.4% | Shreya V Patil 83.4% | Nilesh Rumal 83.4% | Abdul Azeem K 82.8% | Shreyas B 82.8% | Kushi V 82.6% | Bhoomikaa B 82.4% | Raksha J D 82.4% | Rashi A T 82% | Rahul V Jangid 81.8 | Niharika S N 81.6% | Shreedevi K M 81.2% | Uday S P 81% | Kalashree T P 80.4% | Apeksha D R 80.2% | Taseed N Khan 80%
Goutham Nair P M 80% | Greeshmitha B A 79.6% | Srushti G 79.4% | Shreyans B Jain 79.2% | Shreya L U 77.6% | Spandana M 77.6% | Sanjana M H 77.6% | Rachana R V 77.4% | Daniya Banu A 77.2% | Vijayakumar K S 77% | Devaraj Singh 77% | Vignesh D K 76.6% | Vinaya Raju P 76.6% | Nikhil D V 76.6% | Darshan S N 76.4% | Shreyas W V 75.8%
Ganashree R 75.8% | Shreya Gururaj 75.6% | Sujal H S 75.2% | Niranjan G M 75%

**Sanskrit 100/100**

Anvitha R Mothi 96.6% | Rakshita R Vernekar 84.8% | Rishitha S Chawan 80.6% | Shreekanth B R | Nandini M Savanth

17 90% Above
77 Distinction
31 First Class

**Amrita PU College GD 0429**
**Admissions Open - 2022-23**
**Science & Commerce**

**The Management, Principal & Staff extremely Proud to announce the result**

Education for life is as important as education for livelihood
-Amma

## ವಾರ ಭವಿಷ್ಯ

**ದಿನಾಂಕ : 24.07.2022 ರಿಂದ 30.07.2022**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಅನಿರೀಕ್ಷಿತ ಖರ್ಚುಗಳು ಹೆಚ್ಚಾಗಿರುವುದರಿಂದ ಹಣಕಾಸಿನ ಬಗ್ಗೆ ವ್ಯವಸ್ಥೆ ಮಾಡಿಕೊಳ್ಳುವುದು ಉತ್ತಮ. ರೈತಾಪಿ ಜನರು ಕೃಷಿ ಉಪಕರಣಗಳನ್ನು ಬಳಸುವಾಗ ಅಥವಾ ನೀರಿನಲ್ಲಿ ಕೆಲಸ ಮಾಡುವಾಗ ಸಾಕಷ್ಟು ಎಚ್ಚರವಹಿಸುವುದು ಲೇಸು. ಹೊಸ ಆದಾಯದ ಮೂಲ ಹೆಚ್ಚಿಸಿಕೊಳ್ಳಲು ಹಲವು ದಾರಿ ಕಂಡುಕೊಳ್ಳುವಿರಿ. ನ್ಯಾಯಾಲಯದ ವ್ಯಾಜ್ಯಗಳು ನಿಮ್ಮಂತೆ ಆದರೂ ಕೂಡ ಸಾಧ್ಯವಾದಷ್ಟು ರಾಜೀ ಪಂಚಾಯ್ತಿ ಮುಖಾಂತರ ಬಗೆಹರಿಸಿಕೊಳ್ಳುವುದು ಮೇಲು. ವಿದ್ಯಾರ್ಥಿಗಳು ಅಧ್ಯಯನದ ಕಡೆ ವಿಶೇಷ ಗಮನ ಹರಿಸುವುದು ಉತ್ತಮ. ಭಾನು-ಸೋಮ-ಮಂಗಳ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸಾಧ್ಯವಿದ್ದಲ್ಲಿ ಕುಲದೇವರಾಧನೆಯನ್ನು ವಿಶೇಷವಾಗಿ ಮಾಡಿರಿ. ಅವಿವಾಹಿತರಿಗೆ ಉತ್ತಮ ಸಂಬಂಧಗಳು ತಾವಾಗಿಯೇ ಹುಡುಕಿಕೊಂಡು ಬರಲಿವೆ. ನಿವೃತ್ತಿಯಂಚಿನಲ್ಲಿರುವ ಖಾಸಗಿ ಕಂಪನಿ ನೌಕರರು ಸಹೋದ್ಯೋಗಿಗಳೊಂದಿಗೆ ಹೊಂದಿಕೊಂಡು ಹೋಗುವುದು ಲೇಸು. ಇಲ್ಲವಾದಲ್ಲಿ ಪಿಂಚಣಿ, ಸಂಚಿತ ಗಳಿಕೆ ಮೊದಲಾದವುಗಳಿಗೆ ತೊಂದರೆಯಾಗಬಹುದು. ಕುಟುಂಬದ ಸದಸ್ಯರೊಂದಿಗೆ ಸಾಮರಸ್ಯ ಕಾಪಾಡಿಕೊಳ್ಳುವುದರಿಂದ ನಿಮ್ಮ ವ್ಯಕ್ತಿತ್ವ ಎಲ್ಲರಿಗೂ ಅರ್ಥವಾಗಲಿದೆ. ಆರ್ಥಿಕ ಪರಿಸ್ಥಿತಿ ಸಾಧಾರಣ.ಆರೋಗ್ಯದ ಬಗ್ಗೆ ಗಮನವಿರಲಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಸದಾ ಸಮುದ್ರದಲ್ಲೇ ಸಂಚರಿಸುತ್ತಾ ಕೆಲಸ ಮಾಡುವವರು ಸಾಕಷ್ಟು ಮುನ್ನೆಚ್ಚರಿಕೆಯೊಂದಿಗೆ ಸಮುದ್ರಕ್ಕಿಳಿಯುವುದು ಮೇಲು. ನವದಂಪತಿಗಳಲ್ಲಿದ್ದ ವೈಯಕ್ತಿಕ ಭಿನ್ನಾಭಿಪ್ರಾಯಗಳು ದೂರವಾಗಿ ಸಾಮರಸ್ಯ ಮೂಡಲಿದೆ. ಉತ್ತಮವಾದ ಹಣಕಾಸಿನ ಹರಿವಿನಿಂದ ನಿಮ್ಮ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಯಲಿವೆ. ಮಹಿಳೆಯರು, ತಾವಾಗಿಯೇ ಹೋಗಿ ಖರೀದಿಸಲಿರುವ ವಸ್ತುಗಳ ವಿಚಾರದಲ್ಲಿ ಮೋಸ ಹೋಗುವ ಸಂಭವವಿದೆ. ಸರ್ಕಾರದಿಂದಾಗಬೇಕಾಗಿರುವ ಕೆಲಸಗಳು ರಾಜಕಾರಣಿಗಳ ಬೆಂಬಲವಿಲ್ಲದೆ ಆಗಲು ಸಾಧ್ಯವಿಲ್ಲ. ಗುರುಗಳ ದರ್ಶನ ಪಡೆಯಿರಿ. ಮಂಗಳ-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಸಾಂಸಾರಿಕ ಸಮಸ್ಯೆಗಳನ್ನು ನೀವಾಗಿಯೇ ಖುದ್ದು ಬಗೆಹರಿಸಿಕೊಳ್ಳುವುದು ಮೇಲು. ಇದಕ್ಕೆ ಹೆಚ್ಚಿನ ಸಮಯಬೇಕಾಗಬಹುದು. ಆದರೂ ಚಿಂತೆಬೇಡ. ಮಹಿಳಾ ರಾಜಕಾರಣಿಗಳು ಕೆಲಕಾಲ ತಟಸ್ಥರಾಗಿರುವುದು ಮೇಲು. ಇಲ್ಲವಾದಲ್ಲಿ ಅನೇಕ ಸಂಬಂಧಪಡದ ಆಪಾದನೆಗಳನ್ನು ಎದುರಿಸಬೇಕಾದೀತು. ಪ್ರಭಾವೀ ವ್ಯಕ್ತಿಗಳನ್ನು ಅನುಸರಿಸುವುದು ಒಳ್ಳೆಯದೇ ಆದರೂ, ಈ ವಿಷಯದಲ್ಲಿ ಮುಂದಾಲೋಚನೆ ಮಾಡುವುದು ಉತ್ತಮ. ತಾಂತ್ರಿಕ ಪದವೀಧರರಿಗೆ ಹಲವು ಅತ್ಯುತ್ತಮ ಅವಕಾಶಗಳು ಬರಲಿವೆ. ಆದರೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಯ್ಕೆ ಮಾಡುವುದು ಲೇಸು. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ಟೆ.ಟ.ಟಿ.ಟು.ಟೆ)**

ಅನಿರೀಕ್ಷಿತವಾದ ಘಟನೆಯೊಂದರಿಂದಾಗಿ ತಂದೆ-ಮಕ್ಕಳ ನಡುವೆ ತುಸು ವಾಗ್ವಾದವಾಗುವ ಸಂಭವವಿದೆ. ಸಾಧ್ಯವಾದಷ್ಟು ಇದು ವಿಕೋಪಕ್ಕೆ ಹೋಗದಂತೆ ತಡೆಯಲು ಪ್ರಯತ್ನಿಸಿ. ಹಳೇಮನೆ ರಿಪೇರಿ ಮಾಡಿಸುವ ಮೊದಲು ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮೊದಲೇ ಮಾಡಿಕೊಳ್ಳುವುದು ಮೇಲು. ಮಹಿಳೆಯರು ಅನಾವಶ್ಯಕ ಅಲಂಕಾರಿಕ ವಸ್ತುಗಳನ್ನು ಖರೀದಿ ಮಾಡಲಿದ್ದಾರೆ. ಇದು ಅನಾವಶ್ಯಕ ಖರ್ಚಿಗೆ ದಾರಿ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಮುದ್ರ ಖಾದ್ಯಗಳಿಗೆ ಹೆಚ್ಚಿನ ಬೇಡಿಕೆ ಬರಲಿದೆ.ವ್ಯವಹಾರದಲ್ಲಿ ತಕ್ಕಮಟ್ಟಿಗೆ ಪ್ರಗತಿ ಕಾಣಲಿದೆ. ಭಾನು-ಗುರು-ಶುಕ್ರ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ನೆರೆಹೊರೆಯವರೊಂದಿಗೆ ಸಂಬಂಧಗಳನ್ನು ಸುಧಾರಿಸಿಕೊಳ್ಳುವುದು ಮೇಲು. ಹೊಸಮನೆ ಕಟ್ಟಲು ಆರಂಭಿಸುವ ಮೊದಲು ಮನೆಯ ಹಿರಿಯರೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಹಣಕಾಸಿನ ಮುಗ್ಗಟ್ಟು ಸಾಕಷ್ಟು ಹೈರಾಣಾಗಿಸಲಿದೆ. ಮಕ್ಕಳ ವಿದ್ಯಾಭ್ಯಾಸದ ಚಿಂತೆ ದೂರವಾಗಲಿದೆ. ಯುವಕರಿಗೆ ಉತ್ತಮ ದಿನಗಳು. ವಿದೇಶದಲ್ಲಿರುವ ಮಗನಿಂದ ಶುಭ ಸಮಾಚಾರವೊಂದು ಕೇಳಿಬರಲಿದೆ. ಅನಿರೀಕ್ಷಿತವಾಗಿ ತೀರ್ಥಯಾತ್ರೆ ಮಾಡುವ ಯೋಗ ಬರಲಿದೆ. ಇದನ್ನು ಯಾವುದೇ ಕಾರಣಕ್ಕೂ ಕೈಚೆಲ್ಲಬೇಡಿ. ಉದ್ಯಮಿಗಳಿಗೆ ವೃತ್ತಿಯಲ್ಲಿ ಉದಾಸೀನತೆ ಕಂಡುಬರಲಿದೆ. ಸೋಮ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನಿಮಗೆ ಸಂಬಂಧಪಡದ ಅಥವಾ ತಿಳಿಯದಿರುವ ವಿಚಾರಗಳ ಬಗ್ಗೆ ಮಾತನಾಡಲು ಹೋಗಿ ಅಪಹಾಸ್ಯಕ್ಕೆ ಗುರಿಯಾಗುವಿರಿ. ಇಲ್ಲವೇ ಅವಮಾನ ಖಂಡಿತಾ ತಪ್ಪಿದ್ದಲ್ಲ. ಔಷಧಿ ವ್ಯಾಪಾರಿಗಳಿಗೆ ಲೆಕ್ಕ ತಪಾಸಣಾಧಿಕಾರಿಗಳಿಂದ ತೊಂದರೆಯಾಗಬಹುದು. ಲೇವಾದೇವಿ ವ್ಯವಹಾರದಲ್ಲಿ ಸಾಕಷ್ಟು ನಷ್ಟವಾಗಬಹುದು. ದೈನಂದಿನ ಜೀವನದಲ್ಲಿ ನಿರಾಸಕ್ತಿ ಮೂಡಲಿದೆ. ಕೈಗಾರಿಕೋದ್ಯಮಿಗಳಿಗೆ, ಹಣಕಾಸು ಸಂಸ್ಥೆಗಳಿಂದ ಸಾಕಷ್ಟು ನೆರವು ದೊರೆಯಲಿದೆ. ಆಹಾರಧಾನ್ಯಗಳ ಮಾರಾಟಗಾರರಿಗೆ ವಹಿವಾಟು ಜೋರಾಗಿಯೇ ನಡೆಯಲಿದೆ. ಲಾಭವೂ ಸಾಕಷ್ಟು ಸಿಗಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮಡದಿಯ ಆರೋಗ್ಯದ ವಿಚಾರವಲ್ಲದೇ ಉದ್ಯಮಕ್ಕೆ ಸಂಬಂಧಿಸಿದ ಹತ್ತು ಹಲವು ಸಮಸ್ಯೆಗಳು ನಿಮ್ಮನ್ನು ಹೈರಾಣಾಗಿಸುವವು. ಜೊತೆಗೆ ಹಣಕಾಸು ಹೊಂದಿಸುವುದಕ್ಕೂ ಹರಸಾಹಸ ಪಡುವಿರಿ. ಅಂದುಕೊಂಡಿದ್ದೆಲ್ಲವೂ ಲೆಕ್ಕಾಚಾರಕ್ಕೆ ವಿರುದ್ಧವಾಗಲಿವೆ. ಶತ್ರುಗಳನ್ನು ಮಣಿಸಲು ಹಲವು ತಂತ್ರಗಳನ್ನು ಹೂಡುವುದು ಉಚಿತವೇ ಆದರೂ, ಅದು ನಿಮ್ಮ ವಿರುದ್ಧ ತಿರುಗದಂತೆ ಎಚ್ಚರ ವಹಿಸುವುದು ಮೇಲು. ವಿದ್ಯಾರ್ಥಿಗಳ ಅಧ್ಯಯನಕ್ಕೆ ಬೇಕಾದ ಸಕಲ ಸವಲತ್ತುಗಳು ದೊರಕಿ ಅಧ್ಯಯನ ನಿರಾತಂಕವಾಗಿ ಸಾಗಲಿದೆ. ಮನೆಯ ಹಿರಿಯರಿಗೆ ಹೆಚ್ಚಿನ ಗೌರವ ಸಿಗಲಿದೆ. ಮಂಗಳ-ಬುಧ-ಶುಕ್ರ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹಣಕಾಸಿನ ಹರಿವು ಮಂದವಾಗಿರುವುದರಿಂದ ಹೊಸ ಯೋಜನೆಗಳನ್ನು ತಾತ್ಕಾಲಿಕವಾಗಿ ಮುಂದೂಡುವುದು ಮೇಲು. ಕರಿದ ಪದಾರ್ಥಗಳನ್ನು ಹೆಚ್ಚು ತಿಂದಿದ್ದರ ಪರಿಣಾಮವಾಗಿ ತುರಿಕೆ ಮೊದಲಾದ ಚರ್ಮಸಂಬಂಧಿ ಕಾಯಿಲೆಗಳು ನಿಮ್ಮನ್ನು ಬಾಧಿಸಬಹುದು. ಆಸ್ತಿ ವಿಭಾಗಕ್ಕೆ ಸಂಬಂಧಿಸಿದಂತೆ ಅನುಭವಿಗಳಾದ ಮಧ್ಯವರ್ತಿಗಳು ನಿಮ್ಮ ಪರವಾಗಿ ಮಾತನಾಡಲಿದ್ದರೆ. ಅವರಿಗೆ ಕೃತಜ್ಞತೆ ಸಲ್ಲಿಸುವುದನ್ನು ಮರೆಯಬೇಡಿ. ಯುವಕರು ತಮ್ಮ ಅತ್ಯಂತ ಚುರುಕಾದ ಕೆಲಸ, ಕಾರ್ಯಗಳಿಂದಾಗಿ ಎಲ್ಲರ ಗಮನ ಸೆಳೆಯಲಿದ್ದಾರೆ. ವಿಷ್ಣು ಸಹಸ್ರನಾಮವನ್ನು ಸಾಧ್ಯವಾದಷ್ಟು ಹೆಚ್ಚು ಪಠಿಸಿರಿ. ಭಾನು-ಬುಧ-ಗುರು-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಯಾವುದೋ ಪ್ರಸಂಗವೊಂದರಲ್ಲಿ ವಹಿಸಿಕೊಂಡ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಇದರಿಂದ ನಿಮ್ಮ ಗೌರವ ಹೆಚ್ಚಲಿದೆ. ರಾಜಕಾರಣಿಗಳು ಎದುರಾಳಿಗಳ ಹಾಗು ತಮ್ಮ ಹಿಂಬಾಲಕರ ತಂತ್ರ ಪ್ರತಿತಂತ್ರಗಳಿಂದಾಗಿ ತಮ್ಮ ವರ್ಚಸ್ಸಿಗೆ ಧಕ್ಕೆ ತಂದುಕೊಳ್ಳುವರು. ಹಣಕಾಸಿನ ಹರಿವು ಉತ್ತಮವಾಗಿಯೇ ಇರುವುದರಿಂದ ದೈನಂದಿನ ಜೀವನಕ್ಕೇನೂ ತೊಂದರೆಯಿಲ್ಲ. ಕಷ್ಟದ ಸಮಯದಲ್ಲಿ ಹಿರಿಯರು ನಿಮ್ಮ ನೆರವಿಗೆ ಬರುವುದರಿಂದ ಚಿಂತೆಬೇಡ. ಸಹೋದ್ಯೋಗಿಗಳ ಮನೆಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪಾಲ್ಗೊಳ್ಳುವಿರಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ನಿಮ್ಮ ವಿರೊಧಿಗಳ ಸೋಲು ನಿಮಗೆ ಒಳಗೊಳಗೇ ಸಂತಸವನ್ನುಂಟು ಮಾಡಿದರೂ ತೋರಿಕೆಗೆ ಅನುಕಂಪವನ್ನು ತೋರುವಿರಿ. ಆದರೆ ಸಂಬಂಧಿಗಳಿಂದ ಉಂಟಾಗಬಹುದಾದ ಸಮಸ್ಯೆಗಳು ನಿಮಗೆ ತಲೆನೋವಾಗಿ ಪರಿಣಮಿಸಲಿವೆ. ವಿದ್ಯಾರ್ಥಿಗಳು ಅಧ್ಯಯನವನ್ನು ಪರಿಗಣಿಸುವುದು ಭವಿಷ್ಯದ ದೃಷ್ಟಿಯಿಂದ ಉತ್ತಮ. ಚಿಕ್ಕ ಮಕ್ಕಳಿಗೆ ಅನಾರೋಗ್ಯ ನಿಮಿತ್ತ ಉಸಿರಾಟದ ತೊಂದರೆ ಕಾಣಿಸಿಕೊಳ್ಳಬಹುದು. ಪ್ರೇಮಿಗಳ ಹುಚ್ಚಾಟದಿಂದಾಗಿ ಉಭಯ ಕುಟುಂಬದಲ್ಲೂ ಸಮಸ್ಯೆಗಳು ಎದುರಾಗಲಿವೆ. ಆರ್ಥಿಕ ಪರಿಸ್ಥಿತಿ ಉತ್ತವಾಗಿರುವುದರಿಂದ ಚಿಂತೆಬೇಡ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಚಾಡಿಮಾತುಗಳನ್ನು ಕೇಳಿ, ನೀವಾಡಲಿರುವ ಕೊಂಕು ಮಾತುಗಳು ಬಂಧುಗಳನ್ನು ದೂರವಾಗಿಸಬಹುದು. ಪ್ರಾಯಕ್ಕೆ ಬಂದ ಮಕ್ಕಳನ್ನು ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಮೊದಲು ಹಲವು ಬಾರಿ ಯೋಚಿಸುವುದು ಉತ್ತಮ. ಹಣಕಾಸಿನ ಹರಿವು ಎಷ್ಟೇ ಉತ್ತಮವಾಗಿದ್ದರೂ, ಅನಿರ್ಬಂಧಿತ ಖರ್ಚು ವೆಚ್ಚಗಳು, ನಿಮ್ಮ ಗಳಿಕೆಯ ಜೊತೆಗೆ ಉಳಿಕೆಯ ಗಂಟನ್ನೂ ಕರಗಿಸಬಹುದು. ಉತ್ತಮ ಸಾಧಕರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ. ದೃಷ್ಟಿದೋಷ ಅಥವಾ ರಕ್ತ ಸಂಬಂಧಿ ಆರೋಗ್ಯ ಸಮಸ್ಯೆಗಳಿರುವವರು ತಜ್ಞ ವೈದ್ಯರ ಸಲಹೆಯಂತೆ ನಡೆದುಕೊಳ್ಳುವುದು ಮೇಲು. ಭಾನು-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 28.7.2022ನೇ ಗುರುವಾರ ಭೀಮನ ಅಮವಾಸ್ಯೆ (ದೀಪಸ್ತಂಭ ಗೌರೀವ್ರತ).**

# ಗಡಿಯಾರ ವೃತ್ತಕ್ಕೆ ಕರ್ನಲ್ ರವೀಂದ್ರನಾಥ್ ವೃತ್ತವೆಂದು ನಾಮಕರಣ

ದಾವಣಗೆರೆ, ಜು.23- ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿನ ಅಮರ್ ಜವಾನ್ ಉದ್ಯಾನ ಸಮೀಪದ ಗಡಿಯಾರ ವೃತ್ತಕ್ಕೆ ವೀರಚಕ್ರ ಪುರಸ್ಕೃತ ಕರ್ನಲ್ ಎಂ.ಬಿ. ರವೀಂದ್ರನಾಥ್ ವೃತ್ತ ಎಂದು ನಾಮಕರಣ ಮಾಡಿ, ನಾಮಫಲಕ ಅನಾವರಣಗೊಂಡಿತು.

ಇಂದು ನಡೆದ ಸಮಾರಂಭದಲ್ಲಿ ನಾಮಫಲಕವನ್ನು ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ ಜಂಟಿಯಾಗಿ ಅನಾವರಣ ಮಾಡಿದರು.

ಈ ವೇಳೆ ಮಾತನಾಡಿದ ಸಂಸದ ಸಿದ್ದೇಶ್ವರ, ಕರ್ನಲ್ ರವೀಂದ್ರನಾಥ ಕಾರ್ಗಿಲ್ ಯುದ್ಧದಲ್ಲಿ ನೇತೃತ್ವ ವಹಿಸಿದ್ದ ಸೇನಾಧಿಕಾರಿ. ಅವರ ವಿಶಿಷ್ಟ ಸೇವೆಗಾಗಿ ಕೇಂದ್ರ ಸರ್ಕಾರ ವೀರಚಕ್ರ ಪ್ರಶಸ್ತಿ ನೀಡಿತ್ತು. ಇಂತಹ ಭಾರತ ಮಾತೆಯ ಪುತ್ರ ದಾವಣಗೆರೆಯವರು ಎನ್ನಲು ಹೆಮ್ಮೆ. ಅವರ ಹೆಸರನ್ನು ವೃತ್ತಕ್ಕೆ ನಾಮಕರಣ ಮಾಡುವ ಮೂಲಕ ಪಾಲಿಕೆಯು ಗೌರವ ನೀಡಿ, ಹೆಸರು ಅಮರವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿ, ಯುವ ಜನರಿಗಷ್ಟೇ ಅಲ್ಲ, ಹಿರಿಯರಿಗೂ ಕರ್ನಲ್ ರವೀಂದ್ರನಾಥ್‌ರ ದೇಶ ಪ್ರೇಮ ಸ್ಫೂರ್ತಿಯಾಗಿದೆ. ದೇಶದ ಗಡಿ ರಕ್ಷಣೆಯಲ್ಲಿ ವೀರ ಯೋಧರ ಸೇವೆ, ತ್ಯಾಗಗಳ ಬಗ್ಗೆ ಭಾರತೀಯರು ಹೆಮ್ಮೆಯೊಂದಿಗೆ ಗೌರವಿಸಬೇಕು ಎಂದು ಹೇಳಿದರು.




ಶಾಸಕ ರವೀಂದ್ರನಾಥ್ ಮಾತನಾಡಿ, ಕರ್ನಲ್ ರವೀಂದ್ರನಾಥ್ ಅವರ ಸೈನ್ಯದ ಸಾಧನೆಯನ್ನು ಯುವ ಪೀಳಿಗೆಯು ಸ್ಫೂರ್ತಿಯಾಗಿ ಸ್ವೀಕರಿಸಿ, ದೇಶ ರಕ್ಷಣೆಗಾಗಿ ಸೈನ್ಯದಲ್ಲಿ ಸೇವೆ ಸಲ್ಲಿಸಲು ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತಿ ವಹಿಸಬೇಕು ಎಂದು ಆಶಿಸಿದರು.

ಮಾಜಿ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ನನ್ನ ಮೇಯರ್ ಅವಧಿಯಲ್ಲಿನ ಗಡಿಯಾರ ವೃತ್ತಕ್ಕೆ ಕರ್ನಲ್ ರವೀಂದ್ರನಾಥ್ ಅವರ ಹೆಸರು ನಾಮಕರಣ ಮಾಡುವ ನಿರ್ಣಯ ಇದೀಗ ಸಾಕಾರಗೊಂಡಿರುವುದು ಸಂತಸ ತಂದಿದೆ ಎಂದರು. ಕರ್ನಲ್ ರವೀಂದ್ರನಾಥ್‌ರ ಅಕ್ಕ ಸರೋಜಮ್ಮ, ಕರ್ನಲ್ ರವೀಂದ್ರನಾಥ್ ಕುಟುಂಬದ ಎಂ.ಬಿ. ರಾಜೇಂದ್ರ ಮಾತನಾಡಿದರು.

ಮಹಾಪೌರರಾದ ಶ್ರೀಮತಿ ಜಯಮ್ಮ ಗೋಪಿನಾಯ್ಕ, ಉಪ ಮಹಾಪೌರರಾದ ಶ್ರೀಮತಿ ಗಾಯತ್ರಿ ಬಾಯಿ ಖಂಡೋಜಿರಾವ್, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷ ಸೋಗಿ ಶಾಂತಕುಮಾರ್, ಸದಸ್ಯರಾದ ರೇಖಾ ಸುರೇಶ್, ಎ. ನಾಗರಾಜ್, ಕೆ. ಚಮನ್ ಸಾಬ್, ಕೆ. ಪ್ರಸನ್ನಕುಮಾರ್, ಕೆ.ಎಂ. ವೀರೇಶ್, ಆಯುಕ್ತ ವಿಶ್ವನಾಥ ಮುದಜ್ಜಿ, ನಿವೃತ್ತ ಸೈನಿಕರ ಸಂಘದ ಸತ್ಯಪ್ರಕಾಶ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಗರದಲ್ಲಿ ಇಂದು ಹಿಂದೂ ಧರ್ಮ ಜಾಗೃತಿ ಅಭಿಯಾನ

ದಾವಣಗೆರೆ, ಜು.23- ವಿಶ್ವ ಹಿಂದೂ ರಕ್ಷಣಾ ಸಮಿತಿ ವತಿಯಿಂದ ನಾಳೆ ದಿನಾಂಕ 24 ರ ಭಾನುವಾರ ಮಧ್ಯಾಹ್ನ 3 ಗಂಟೆಗೆ ಜಯದೇವ ವೃತ್ತದ ಶಿವಯೋಗಿ ಮಂದಿರದಲ್ಲಿ 'ಹಿಂದೂ ಧರ್ಮ ಜಾಗೃತಿ ಅಭಿಯಾನ' ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಸಂಸ್ಥಾಪಕ ಅಧ್ಯಕ್ಷ ಜಿ.ಎ. ಗುರುದೇವ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ವಚನಾನಂದ ಸ್ವಾಮೀಜಿ, ಬೆಟಗೇರಿಯ ಶ್ರೀ ನೀಲಕಂಠ ಪಟ್ಟದಾರ್ಯ ಸ್ವಾಮೀಜಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಬಸವಪ್ರಭು ಸ್ವಾಮೀಜಿ, ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಶ್ರೀ ಬಸವ ಮಾಚಿದೇವ ಸ್ವಾಮೀಜಿ, ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಶ್ರೀ ಇಮ್ಮಡಿ ಬಸವಪ್ರಭು ಕೇತಯ್ಯ ಸ್ವಾಮೀಜಿ, ಉಜಿರೆ ಶ್ರೀ ಬ್ರಹ್ಮಾನಂದ ಸ್ವಾಮೀಜಿ, ಗುಲಬರ್ಗಾದ ಶ್ರೀ ಆಂದೋ ಲನ ಸ್ವಾಮೀಜಿ, ಕಾಳಿಮಠದ ಶ್ರೀ ಋಷಿಕುಮಾರ ಸ್ವಾಮೀಜಿ, ಶ್ರೀ ಪ್ರಣವಾನಂದ ಸ್ವಾಮೀಜಿ, ಶ್ರೀ ಗುರುದೇವ ಸ್ವಾಮೀಜಿ ಭಾಗವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಂ.ಪಿ. ರೇಣುಕಾಚಾರ್ಯ, ನಾಗನಗೌಡ ದಾ. ಮರಿಗೌಡ್ರ, ಪ್ರಮೋದ್ ಮುತಾಲಿಕ್, ದೇವರಮನಿ ಶಿವಕುಮಾರ್, ಬಿ.ಜೆ. ಅಜಯ್ ಕುಮಾರ್, ದಿನೇಶ್ ಕೆ. ಶೆಟ್ಟಿ, ಎಸ್.ಎಲ್. ಆನಂದಪ್ಪ, ಪ್ರತಾಪ್, ಪ್ರಭು ಕಲ್ಬುರ್ಗಿ, ಯೋಗೀಶ್ ರಾವ್ ಸಿಂಧೆ ಪಾಲ್ಗೊಳ್ಳಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಮಿತಿ ಪದಾಧಿಕಾರಿಗಳಾದ ಎಸ್.ಪಿ. ಶ್ರೀನಿವಾಸ್, ಜಿ.ಎಸ್.ಪರಶುರಾಮ್, ಎಸ್.ಕೆ. ಬಸವರಾಜಪ್ಪ, ಐ. ಪರಶುರಾಮ್, ಶ್ರೀಕಾಂತ್ ರವೀಂದ್ರ ಮಟ್ಟಿಕಲ್ಲು, ವಿಜಯ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಗಾಣಿಗರ ಸಂಘದಿಂದ ಪುರಸ್ಕಾರ

ಗಾಣಿಗರ ಸಮಾಜದ ಮಹಿಳಾ ಘಟಕದ ವತಿಯಿಂದ ಕಳೆದ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ. 85 ಕ್ಕೆ ಮೇಲ್ಪಟ್ಟು ಅಂಕ ಪಡೆದ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರ ಸ್ಕಾರ ನೀಡುವ ಸಮಾರಂಭವು ರೋಟರಿ ಬಾಲಭವನ ದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ. ಅಧ್ಯಕ್ಷತೆಯನ್ನು ಉಮಾ ವೀರಭದ್ರಪ್ಪ ವಹಿಸುವರು. ಕಾರ್ಯಕ್ರಮವನ್ನು ಮಾಜಿ ಶಾಸಕ ಶಿವರಾಜ್ ಸಜ್ಜನ್ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಕೆ.ಎಸ್. ಮಲ್ಲೇಶಪ್ಪ, ಡಾ. ಜಿ.ಸಿ. ಬಸವರಾಜ್ ಆಗಮಿಸುವರು.

## ಜಿ. ದ್ಯಾಮಪ್ಪ ನಿಧನಕ್ಕೆ ಜಿಲ್ಲಾ ಕುರುಬ ಸಮಾಜ ಸಂತಾಪ

ದಾವಣಗೆರೆ,ಜು.23- ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷರೂ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರೂ ಆದ ಕೊಕ್ಕನೂರಿನ ಜಿ. ದ್ಯಾಮಪ್ಪ ಅವರ ನಿಧನಕ್ಕೆ ಜಿಲ್ಲಾ ಕುರುಬ ಸಮಾಜವು ತೀವ್ರ ಸಂತಾಪ ವ್ಯಕ್ತಪಡಿಸಿದೆ. ದ್ಯಾಮಪ್ಪ ಅವರ ನಿಧನ ಕುರುಬ ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ - ವಕೀಲ ಲೋಕಿಕೆರೆ ಸಿದ್ದಪ್ಪ ತಿಳಿಸಿದ್ದಾರೆ.

## ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಇಂದು

ಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನೆ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಸಮಕಾಲೀನ ಸನ್ನಿವೇಶ- ಹೊಸ ಪೀಳಿಗೆಯ ನೋಟ ಕುರಿತ ಗೋಷ್ಠಿ ನಡೆಯಲಿದೆ. ಎಂ. ಉಮಾದೇವಿ, ಹ.ರಾ. ಮಹೇಶ್, ಅರುಣ ಜೋಳದ ಕೂಡ್ಲಿಗೆ, ಡಾ. ರಾಜಶೇಖರಮೂರ್ತಿ, ದೇವೇಂದ್ರಪ್ಪ, ಅನಂತನಾಯಕ್, ಅಶ್ವಿನಿ ಮದನಕರ್, ಮುಸ್ತಫಾ, ರಾಜು ಗುಂಡಾಪುರ, ಶುಕ್ಲ ಭಾರತಿ ಭಾಗವಹಿಸುವರು. ಮಲ್ಲಿಗೆ ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಕರ್ನಾಟಕದ ಜನ ಚಳವಳಿಗಳು: ಹಿನ್ನೋಟ ಕುರಿತು ಗೋಷ್ಠಿ ನಡೆಯಲಿದೆ. ದಲಿತ ಚಳವಳಿ ಕುರಿತು ಸಣ್ಣರಾಮ, ರೈತ ಚಳವಳಿ ಕುರಿತು ಪ್ರಕಾಶ್ ಕಮ್ಮರಡಿ, ಮಹಿಳಾ ಚಳವಳಿ ಕುರಿತು ಎನ್. ಗಾಯತ್ರಿ, ಕಾರ್ಮಿಕ ಚಳವಳಿ ಕುರಿತು ಕೆ. ಮಹಾಂತೇಶ್ ಮಾತನಾಡಲಿದ್ದಾರೆ. ಡಾ. ಸಿದ್ದನಗೌಡ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮಧ್ಯಾಹ್ನ 2.45 ಕ್ಕೆ ಶಿಕ್ಷಣ ಕೇತ್ರದ ಸ್ಥಿತಿ-ಗತಿ ಕುರಿತು ಅಲ್ಲಮಪ್ರಭು ಬೆಟ್ಟದೂರು ಅಧ್ಯಕ್ಷತೆಯಲ್ಲಿ ಗೋಷ್ಠಿ ನಡೆಯಲಿದ್ದು, ಅಂಗನವಾಡಿ ಅಂಗಳದಲ್ಲಿ ಶಿಕ್ಷಣ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಶ್ರೀಪಾದ ಭಟ್ಟ, ಸಾಮಾಜಿಕ ಮತ್ತು ಆರ್ಥಿಕ ನೀತಿ ಮತ್ತು ಶಿಕ್ಷಣ ಕುರಿತು ಕಿರಣ್ ಎಂ. ಗಾಜನೂರು, ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ ಕುರಿತು ವೈ.ಬಿ. ಹಿಮ್ಮಡಿ ಮಾತನಾಡಲಿದ್ದಾರೆ. ಸಂಜೆ 5 ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ. ಎಲ್. ಹನುಮಂತಯ್ಯ ಸಮಾರೋಪ ನುಡಿ ನುಡಿಯಲಿದ್ದಾರೆ. ಭಕ್ತರಹಳ್ಳಿ ಕಾಮರಾಜ್, ಆರ್.ಜಿ. ಹಳ್ಳಿ ನಾಗರಾಜ್, ಮೋಹನ್ ರಾಜ್, ಕೆ. ಶರೀಫಾ ಭಾಗವಹಿಸಲಿದ್ದಾರೆ. ಜಸ್ಟಿನ್ ಹೆಚ್. ಎನ್. ನಾಗಮೋಹನದಾಸ್ ಅಧ್ಯಕ್ಷತೆ ವಹಿಸಲಿದ್ದಾರೆ.

## ನಗರದಲ್ಲಿಂದು ಪತಂಜಲಿ ಯೋಗ ಶಿಕ್ಷಣ ತರಬೇತಿ ಸಮಾರೋಪ

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕರ್ನಾಟಕ ಹಮ್ಮಿಕೊಂಡಿರುವ 45 ನೇ ಪ್ರಾಂತ ಪ್ರಶಿಕ್ಷಣ ಶಿಬಿರದ ಸಮಾರೋಪ ನಡೆಯಲಿದೆ. ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1 ರವರೆಗೆ ಸಮಾರೋಪ ಸಮಾರಂಭ ನಡೆಯಲಿದೆ.

ಸುರೇಶ್ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಸಿದ್ಧಮಲ್ಲಪ್ಪ, ಶ್ರೀಕಾಂತ್ ಭಾಗವಹಿಸಲಿದ್ದಾರೆ. ನಿಮಿಷಾಂಬ ಸಮುದಾಯ ಭವನದಲ್ಲಿ ಭಾರತಿ, ಯೋಗಾನಂದಪುರಿ, ಮೀನಾಕ್ಷಿ ಅವರು ಪಾಲ್ಗೊಳ್ಳಲಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಸಿದ್ದೇಶ್, ಕುಮಾರಣ್ಣ, ವೀರಭದ್ರಪ್ಪ, ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಹರೀಶ್ ಕೋಟಿ, ದೇವರಾಜ್. ಕಾರ್ತಿಕ್, ರಾಜ್ಯ ಸರ್ಕಾರಿ ನೌಕರರ ಸಂಘದಲ್ಲಿ ಜಯರಾಮಣ್ಣ, ಕಿರಣ್, ಜಯಪ್ರಕಾಶ್, ಡಾ. ಜನಾರ್ದನ, ಡಾ. ಶಿವಣ್ಣ ತುರುವೇಕೆರೆ ಭಾಗವಹಿಸಲಿದ್ದಾರೆ.

## ಇಂದು ಹಳೇ ವಿದ್ಯಾರ್ಥಿಗಳ ಮಿಲನ

ದಾವಣಗೆರೆ ಡಿಆರ್‌ಆರ್ ಸರ್ಕಾರಿ ಪಾಲಿಟೆಕ್ನಿಕ್ ಹಳೇ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಂಘದ ಸದಸ್ಯರುಗಳ 'ಮಿಲನ–22' ಇಂದು ಬೆಳಿಗ್ಗೆ 11ಕ್ಕೆ ಸಂಸ್ಥೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಕಾಲೇಜಿನ ನಿವೃತ್ತ ಪ್ರಾಂಶುಪಾಲರುಗಳು ಉದ್ಘಾಟಿಸಲಿದ್ದು, ಪ್ರಾಂಶುಪಾಲ ಜಿ.ಬಿ. ಸದಾನಂದಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಆರ್.ಎಲ್. ಲಾ ಕಾಲೇಜಿನ ಅಧ್ಯಕ್ಷ ಆರ್.ಎಲ್. ಉಮಾಶಂಕರ್, ನಿವೃತ್ತ ಪ್ರಾಂಶುಪಾಲರಾದ ಎಂ. ಪಂಚಾಕ್ಷರಿ, ಎಂ.ಜಿ. ಹೊರಡಿ, ಟಿ.ಜಿ. ವಿರುಪಾಕ್ಷಪ್ಪ, ಹೆಚ್.ಜಯಪ್ಪ, ಬಿ.ಟಿ. ಮಾರ್ಕಂಡೇಯ, ಮಹ್ಮದ್ ಜಾವೀದ್ ಪಾಲ್ಗೊಳ್ಳಲಿದ್ದಾರೆ.

## ಉತ್ತಮ ಆರೋಗ್ಯಕ್ಕಾಗಿ ಯೋಗ ನಡಿಗೆ



ದಾವಣಗೆರೆ, ಜು.23- ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಮತ್ತು ಪತಂಜಲಿ ಯೋಗ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿರುವ ಐದು ದಿನಗಳ ಯೋಗ ಜೀವನ ದರ್ಶನ-2022ರ ಪ್ರಯುಕ್ತ ಶನಿವಾರ ನಗರದ ಪ್ರಮುಖ ಬೀದಿಗಳಲ್ಲಿ ಯೋಗ ನಡಿಗೆ ನಡೆಯಿತು.

ಬಾಪೂಜಿ ಬ್ಯಾಂಕ್ ಸಮುದಾಯ ಭವನದಿಂದ ಆರಂಭವಾದ ನಡಿಗೆಯಲ್ಲಿ ಯೋಗ ಬಂಧುಗಳು ಭಾಗವಹಿಸಿದ್ದರು. ಡಾ. ಎಂ.ಸಿ. ಮೋದಿ ವೃತ್ತ, ಬಸ್ ನಿಲ್ದಾಣ, ವಿನೋಬ ನಗರ ಮತ್ತಿತರೆ ರಸ್ತೆಗಳಲ್ಲಿ ಯೋಗದ ಮಹತ್ವದ ಸಂದೇಶವನ್ನು ಸಾರಿದರು. ಯೋಗದಿಂದ ಆರೋಗ್ಯ, ಯೋಗದಿಂದ ಉತ್ತಮ ಜೀವನ, ಉತ್ತಮ ಆರೋಗ್ಯ ಜೀವನಕ್ಕೆ ಯೋಗದ ಶ್ರೀರಕ್ಷೆ, ಯೋಗಾಭ್ಯಾಸದಿಂದ ದೇಶದ ಆರೋಗ್ಯ ಇತ್ಯಾದಿ ಫಲಕಗಳ ಪ್ರದರ್ಶನ ಮತ್ತು ಘೋಷಣೆಗಳನ್ನು ಹೇಳುತ್ತ ಯೋಗ ಬಂಧುಗಳು ಜಾಗೃತಿ ಮೂಡಿಸಿದರು.

## ಒಲಂಪಿಯಾಡ್ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಜು.23- ನಗರದ ಚೇತನ ಒಲಂಪಿಯಾಡ್ ಶಾಲೆಯು ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಿರುತ್ತದೆ. ಕು. ಧನುಷ್ ಎಂ.ಎಸ್. ಮತ್ತು ಕು. ಮೋನಿಕಾ ಪಿ. ದೇವಿಗೆರೆ ಶೇ. 98.4 (492) ಕು. ಮೊಹಮದ್ ರಫೀಕ್ ಮಾಲಗಿ ಶೇ. 98 (490), ಕು. ಶ್ರೀಮಾ ಶೆಟ್ಟಿ ಶೇ. 97.8 (489) ಅಂಕಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿರುತ್ತಾರೆ. ಪರೀಕ್ಷೆಗೆ 172 ವಿದ್ಯಾರ್ಥಿಗಳಲ್ಲಿ 19 ವಿದ್ಯಾರ್ಥಿಗಳು ಶೇ. 95 ಕ್ಕಿಂತ ಹೆಚ್ಚು ಅಂಕಗಳನ್ನು, 51 ವಿದ್ಯಾರ್ಥಿಗಳು ಶೇ.90 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುತ್ತಾರೆ. 120 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡ-2, ಗಣಿತ-4, ಸಮಾಜ ವಿಜ್ಞಾನ-3 ವಿದ್ಯಾರ್ಥಿಗಳು 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ. ಈ ಎಲ್ಲಾ ವಿದ್ಯಾರ್ಥಿಗಳಿಗೆ ಕಾರ್ಯದರ್ಶಿ ಶ್ರೀಮತಿ ವಿ. ವಿಜಯಲಕ್ಷ್ಮಿ ಅಭಿನಂದಿಸಿದ್ದಾರೆ.

## 'ಗುರ್ಕಾ ಬಿಎಸ್ VI' ವಾಹನ ಮಾರುಕಟ್ಟೆಗೆ




ದಾವಣಗೆರೆ, ಜು. 23- ಗುರ್ಕಾ 4 ವ್ಹೀಲರ್ ಬಿಎಸ್ VI ವಾಹನ ಕಳೆದ ವಾರ ಮಾರುಕಟ್ಟೆಗೆ ಬಿಡುಗಡೆಯಾಗಿದೆ. ಇದರಲ್ಲಿ ಮರ್ಸಿಡೀಸ್ ಗ್ಯಾಲೆಂಡರ್ ವ್ಯಾಗನ್ ರೀತಿಯಲಿದ್ದು, ಮರ್ಸಿಡೀಸ್‌ನ ಇಂಜಿನ್ ಬಳಸಲಾಗಿದೆ. ಎತ್ತರದಲ್ಲಿಯೂ ಕೂಡಾ ಪೊಜಿಷನ್‌ನಲ್ಲಿದ್ದು, ಮಂಜು, ಕೆಸರು, ಮರಳು, ತೆಗ್ಗು, ದಿಣ್ಣೆ, ಗುಂಡಿ ಯಾವುದೇ ರೀತಿಯ ರಸ್ತೆಗಳಿರಲಿ ತೊಂದರೆ ಇಲ್ಲದೇ ಸರಾಗವಾಗಿ ಪ್ರಯಾಣಿಸಬಹುದಾಗಿದೆ. ಈ ವಾಹನ 2.6 ಲೀಟರ್ ಇಂಜಿನ್ ಹೊಂದಿದೆ. ಇದರಲ್ಲಿ ಲಕ್ಸುರಿ ಕಂಫರ್ಟಬಲ್ 4 ಸೀಟು ಹಾಗೂ ಲಗೇಜ್ ಇಡಲು ಸ್ಥಳಾವಕಾಶ ಇದೆ. ಈಗಾಗಲೇ ವಾಹನಗಳ ಬುಕ್ಕಿಂಗ್ ಆರಂಭವಾಗಿದೆ. ಈ ಸಂದರ್ಭದಲ್ಲಿ ಸಂಸ್ಥೆಯ ಸರ್ವೀಸ್ ಇಂಜಿನಿಯರ್ ಶೇಖರ್ ಮೊದಲಿಯಾರ್, ಸಂಸ್ಥೆ ಪಾಲುದಾರರಾದ ಸಿದ್ದೇಶ್, ಚಂದ್ರಶೇಖರ್ ಉಪಸ್ಥಿತರಿದ್ದರು. ಇಂದು ಮೊದಲ ವಾಹನದ ಕೀಯನ್ನು ಗ್ರಾಹಕರಿಗೆ ನೀಡುವ ಮೂಲಕ ಉದ್ಘಾಟಿಸಲಾಯಿತು.

## ನಗರದಲ್ಲಿ ಇಂದು ಬುದ್ಧ ವಂದನಾ ಪೂಜಾ ಪುಸ್ತಕ ಬಿಡುಗಡೆ

ಇಂಟರ್ ನ್ಯಾಷನಲ್ ಫ್ರೆಂಡ್ಸ್ ಆಫ್ ಬುದ್ದಿಸ್ಟ್ ಸೋಶಿಯಲ್ ಎಜ್ಯುಕೇಷನ್, ಕಲ್ಚರ್ ಅಂಡ್ ಚಾರಿಟಬಲ್ ಟ್ರಸ್ಟ್ (ದಾವಣಗೆರೆ) ಇವರ ವತಿಯಿಂದ ಜಿಲ್ಲಾ ಛಲವಾದಿ ಮಹಾಸಭಾ ಅವರ ಆಶ್ರಯದಲ್ಲಿ 2566ನೇ ಬುದ್ಧ ಜಯಂತಿ ಹಾಗೂ 131ನೇ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಉಚಿತ ನೇತ್ರ ತಪಾಸಣೆ ಶಿಬಿರ ಮತ್ತು ಬುದ್ಧ ವಂದನಾ ಪೂಜಾ ಪುಸ್ತಕ ಬಿಡುಗಡೆ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30ಕ್ಕೆ ಛಲವಾದಿ ಮಹಾಸಭಾ ಭವನದಲ್ಲಿ ಜರುಗಲಿದೆ.

ಸಾನ್ನಿಧ್ಯವನ್ನು ಬಂತೇಜಿ ಬಿಕ್ಕುಣ್ಣಿ ಬುದ್ದಮ್ಮ ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾಧಿಕಾರಿಗಳು ನೆರವೇರಿಸಲಿದ್ದು, ಐಎನ್‌ಎಫ್‌ಬಿ ಟ್ರಸ್ಟ್ ಸಲಹೆಗಾರರಾದ ಡಾ. ಹೆಚ್.ಆರ್. ಸುರೇಂದ್ರ, ನಿವೃತ್ತ ಉಪನ್ಯಾಸಕ ಎ.ಬಿ. ರಾಮಚಂದ್ರಪ್ಪ ಇವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಐಎನ್‌ಎಫ್‌ಬಿ ಟ್ರಸ್ಟ್ ಮಕ್ಕಳ ಮಿತ್ರದ ಅಧ್ಯಕ್ಷ ಡಿ.ಎನ್. ಹಾಲೇಶ್ ನಲ್ಕುದುರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀಮತಿ ದುರ್ಗಾಶ್ರೀ, ವಿಶ್ವನಾಥ್ ಮುದಜ್ಜಿ, ಬಸವನಗೌಡ ಕೋಟೂರ, ಜಯಮ್ಮ ಗೋಪಿನಾಯ್ಕ್, ಕೆ.ಎಂ. ಸುರೇಶ್ ಪಾಲ್ಗೊಳ್ಳಲಿದ್ದು, ವಿಶೇಷ ಆಹ್ವಾನಿತರಾಗಿ ಎನ್. ರುದ್ರಮುನಿ, ಎಸ್. ಶೇಖರಪ್ಪ, ಹೆಚ್.ಕೆ. ಬಸವರಾಜ್, ವೈ. ರಾಮಪ್ಪ ಸೇರಿದಂತೆ ಮತ್ತಿತರರು ಭಾಗವಹಿಸಲಿದ್ದಾರೆ.

**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : **ಪ್ರಿಯಾಂಕ ಜಿ.ಪಿ., ಇಂಜಿನಿಯರ್**
**+91 70190 70400**

8ನೇ ಮೇನ್, 8ನೇ ಕ್ರಾಸ್, ಬ್ಯಾಡಗಿ ಶೆಟ್ರು ಸ್ಕೂಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ-4.

**ಹೃದಯಪೂರ್ವಕ ಕೃತಜ್ಞತೆಗಳು**



ದಾವಣಗೆರೆ ಜನತಾ ಬಜಾರ್‌ನ ಆಡಳಿತ ಮಂಡಳಿಗೆ
ನನ್ನನ್ನು ನೂತನ ನಿರ್ದೇಶಕರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ
ಮಾಜಿ ಸಚಿವರಾದ **ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್,**
ಹರಿಹರ ಕ್ಷೇತ್ರದ ಶಾಸಕರಾದ **ಶ್ರೀ ಎಸ್. ರಾಮಪ್ಪ,**
ಜನತಾ ಬಜಾರ್ ಅಧ್ಯಕ್ಷರಾದ **ಶ್ರೀ ಬಿ.ವಿ. ಚಂದ್ರಶೇಖರ್** ಹಾಗೂ
ಜನತಾ ಬಜಾರ್ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರಿಗೆ ಮತ್ತು
ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರಿಗೆ, ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ
ನನ್ನ ಹೃದಯಪೂರ್ವಕ ಕೃತಜ್ಞತೆಗಳು...



**ಪಿ.ಹೆಚ್. ಶಿವಕುಮಾರ್,** ಮಲೇಬೆನ್ನೂರು.
ನಿರ್ದೇಶಕರು, ಜನತಾಬಜಾರ್, ದಾವಣಗೆರೆ.

ಸೇಲ್ SALE ಸೇಲ್ SALE ಸೇಲ್ SALE ಸೇಲ್ SALE ಸೇಲ್

ಇದೇ ಜುಲೈ 10.07.2022 ರಿಂದ

"ಆಷಾಢ ಮಾಸ ಮತ್ತು ವರಮಹಾಲಕ್ಷ್ಮೀ"

ಹಬ್ಬದ ಪ್ರಯುಕ್ತ

ಜವಳಿಗೆ ವಿಶೇಷ

ರಿಯಾಯಿತಿ

QUALITY ಸೀರೆಗಳು

ನಮ್ಮಲ್ಲಿ ಮಾತ್ರ ಸಿಗುತ್ತವೆ

DOUBLE DISCOUNT

ಆಯ್ದ ಸೀರೆಗಳಿಗೆ

40% ರಿಂದ 60%

ರಿಯಾಯಿತಿ



ಗೌಡರ ಜಯದೇವಪ್ಪ ಸಿಲ್ಕ್ಸ್ & ಸ್ಯಾರೀಸ್

ಗೌಡರ ಜಯದೇವಪ್ಪ ಸಿಲ್ಕ್ ಪ್ಯಾಲೇಸ್

ಚೌಕಿಪೇಟೆ, ದಾವಣಗೆರೆ-1. ಫೋನ್ : 08192 296699

ಸೇಲ್ SALE ಸೇಲ್ SALE ಸೇಲ್ SALE ಸೇಲ್ SALE ಸೇಲ್



ಶ್ರಾವಣ ಮಾಸದ ಪ್ರಯುಕ್ತ ಬಂಪರ್ ಆಫರ್

ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ



ನಿಮ್ಮ 'ರವಿತೇಜ' ದಲ್ಲಿ

10% OFF + 10% OFF

ಎಲ್ಲಾ ಬಟ್ಟೆಗಳ ಮೇಲೆ...

50% OFF

ಆಯ್ದ ಬಟ್ಟೆಗಳ ಮೇಲೆ ...



ಕೆಲವೇ ದಿನಗಳು ಮಾತ್ರ

ಇಂದೇ ಭೇಟಿ ಕೊಡಿ...

**Raviteja**

Textiles

Silk Sarees | Mens Wear | Kids Wear

**Raviteja Garments**
Chamarajpet Ph. : 98800 32999

**Raviteja's**
Vidyanagar Ph. : 98803 82611

**Raviteja Fashion**
Chetana Hotel Road, Ph. : 95916 33871

**Raviteja Silks & Sarees**
Vijayalakshmi Road, Ph. : 98444 66844, 97419 53993



SHAMANUR EDUCATION TRUST (R)

SMT. PUSHPA SHAMANUR MAHALINGAPPA CBSE/ ICSE RESIDENTIAL SCHOOL & PU SCIENCE COLLEGE, DAVANAGERE

#5335, 1st Main, Swami Vivekananda Badavane, Near BIET College, Davangere - 4

CBSE TOPPERS

LAUREATES OF SPSMRS

ICSE TOPPERS

100% Result




Congratulation to Students & Staff Appeared -142 Distinction - 37 First Class -71 & Many More....

☎ 08192 263766 📱 9513630605, 9513630607, 8970071100. www.spsmrs.org


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte